(c) whether land has been acquired in Gadag for construction of a stadium and if so the progress made so for in this regard?

Sri A. Lakshmisagar (Minister for Urban Development and Parliamentary Affairs).—

(a) The bill has become an Act from 8-5-1985. Some of the City Municipalities and Corporations have sent lists for approval of Government. The matter is under consideration.

(b) There is no policy decision.

(c) There are no proposals for acquisition of land under the land Acquisition Act

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ ಯಾವ ಪ್ರಶ್ನೆ ಪಟ್ಟಿ ? ಈ ಸರ್ಕಾರವನ್ನು ಪುಲ್‌ಅಪ್ ಮಾಡದಿದ್ದರೆ ಸಮ್ಮನೆ ಇರುವುದಕ್ಕೆ ಆಗುವುದಿಲ್ಲ. ಈ ರೀತಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುವುದು ಸರಿಯಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ, ಇದರಲ್ಲಿ ಬೇಜವಾಬ್ದಾರಿ ಏನೂ ಇಲ್ಲ. ಉತ್ತರದ ಪ್ರತಿಗಳನ್ನು ಈಗಾಗಲೇ ತಮಗೆ ಕಳುಹಿಸಿಕೊಡಲಾಗಿದೆ. ಅದನ್ನು ಸದನದ ಮುಂದೆ ಇಡತಕ್ಕದು ಒಂದು ಪದ್ಧತಿ.

ಪ್ರಕಟಣೆಗಳು

ಅಧ್ಯಕ್ಷರು.—ಮಾನ್ಯ ವಿಧಾನ ಸಭೆಯ ಸದಸ್ಯರಾದ ಹೆಚ್. ಡಿ. ಚೌಡಯ್ಯನವರು ದಿನಾಂಕ ೧-೮-೧೯೮೫ ರಿಂದ ೩೧-೧-೧೯೮೫ರ ವರೆವಿಗೂ ಅಂದರೆ ೩೧ ದಿನಗಳ ಕಾಲ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ಹೆಚ್. ಡಿ. ಚೌಡಯ್ಯನವರು ಉಪವೇಶನಗಳಿಗೆ ಗೈರು ಹಾಜರಾಗಲು ಸದನವು ತನ್ನ ಒಪ್ಪಿಗೆಯನ್ನು ನೀಡುತ್ತದೆಯೆ ?

(ಮಾನ್ಯ ಸದಸ್ಯರಿಗೆ ಗೈರುಹಾಜರಾಗಲು ಅನುಮೋದನೆಯನ್ನು ನೀಡಲಾಗಿದೆ)

ನಿಯಮ ೫೯ರ ಮೇರೆಗೆ

ಸಮಾಜ ಕಲ್ಯಾಣ ಮಂತ್ರಿಯವರಾದ ವಿ. ಎಲ್. ಪಾಟೀಲರು ಅಧಿಕಾರ ದುರುಪಯೋಗ ಮಾಡಿರುವುದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾನು ಮತ್ತು ಅನೇಕ ಜನ ಮಾನ್ಯ ಸದಸ್ಯರುಗಳು ನಿಯಮಾವಳಿ ಸೂಚನೆ ೫೯ರ ಪ್ರಕಾರ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ ಮಾನ್ಯ ಸದಸ್ಯರಾದ ವಿ. ಎಲ್. ಪಾಟೀಲ್ ಅವರಿಗೆ ಸಂಬಂಧಪಟ್ಟಂತಹ ಈ ಪ್ರಶ್ನೆ ಈಗಾಗಲೇ ಕೋರ್ಟಿನಲ್ಲಿರುವುದರಿಂದ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಿಯಮಾವಳಿಗಳ ಅರಿವು ನಮಗೆ ಇದೆ. ಇಲ್ಲಿ ಪ್ರಶ್ನೆ ಇರತಕ್ಕದ್ದು ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಮಂತ್ರಿ ಮಂಡಲದ ಒಬ್ಬ ಸಚಿವರ ಮೇಲೆ ಇರತಕ್ಕ ಆಪಾದನೆಯನ್ನು ಸದನದಲ್ಲಿ ಚರ್ಚೆಮಾಡುವುದಕ್ಕೆ ಅವಕಾಶ ಸಿಕ್ಕುವುದು ಅಪರೂಪ. ಮಾನ್ಯ ಸಚಿವರು ತಮ್ಮ ಅಧಿಕಾರದ ಅವಧಿಯಲ್ಲಿ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಂಥ ಆರೋಪ ಮತ್ತು ಕಾನೂನನ್ನು ಮುರಿದಂತಹ ಆರೋಪ ಅವರ ಮೇಲೆ ಇದೆ. ಸಮಾಜದಲ್ಲಿ ನಿರ್ಗತಿಕರು, ಬಡವರು ಏನು ಇದ್ದಾರೆಯೋ ಅವರಿಗೆ ಕಾನೂನಿನ ಸೌಲಭ್ಯಗಳನ್ನು ಒದಗಿಸಿಕೊಡುವುದು ಕಾನೂನಿನ ಪ್ರಕಾರ ಇದೆ ಅವರಿಗೆ ರಕ್ಷಣೆಯನ್ನು ಒದಗಿಸಿ ಕೊಡತಕ್ಕದ್ದು ಮಂತ್ರಿಮಂಡಲದಲ್ಲಿರತಕ್ಕಂತಹ ಸಚಿವರ ಜವಾಬ್ದಾರಿ ಇದೆ. ಈ ಸದನದಲ್ಲಿ ಹಿಂದೆ ಕೂಡ ಈ ವಿಷಯ ಪ್ರಸ್ತಾಪಕ್ಕೆ ಬಂತು. ಆಗ ಈ ವಿಷಯವನ್ನು ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ

ಶ್ರೀಮಾನ್ ಹೆಗಡೆಯವರ ಮಂತ್ರಿಮಂಡಲದಲ್ಲಿ ಜನತಾ ಪಕ್ಷದ ಮಂತ್ರಿಮಂಡಲದ ಸಚಿವರೊಬ್ಬರು ಮೌಲ್ಯಗಳನ್ನು ಅಪಮೌಲ್ಯಗೊಳಿಸಿ ರಾಜಕಾರಣಕ್ಕೆ ಬಳಸಿಕೊಳ್ಳುವುದಕ್ಕೆ ಹೋಗಬಾರದಾಗಿತ್ತು ಎಂದು ಹೇಳಿದ್ದೇವೆ. ಒಂದು ಸಾರಿ ಮೌಲ್ಯಾಧಾರಿತ ರಾಜಕಾರಣವನ್ನು ಪ್ರತಿಪಾದನೆ ಮಾಡಿದ ಮೇಲೆ ಅಪಮೌಲ್ಯಕ್ಕೆ ಎಡೆಯಾಗಬಾರದು. ಪ್ರಜಾಪ್ರಭುತ್ವದಲ್ಲಿ ಮೌಲ್ಯಗಳಿಗೆ ಬೆಲೆ ಕೊಡಬೇಕು. ಇವತ್ತು ನೂರಾರು ಜನ ಬೆಳಗಾಂನಿಂದ ಬಂದಿದ್ದಾರೆ. ಮಾನ್ಯ ವಿ. ಎಲ್. ಪಾಟೀಲರು ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡು ಕಾನೂನನ್ನು ಮುರಿದಿದ್ದಾರೆ. ಕರ್ನಾಟಕ ಭೂ ಸುಧಾರಣ ಕಾನೂನು ಇರಬಹುದು, ಎಲೆಕ್ಟ್ರಿಕ್ ಪವರ್‌ಗೆ ಸಂಬಂಧಪಟ್ಟ ಕಾನೂನು ಇರಬಹುದು, ನೀರಿಗೆ ಸಂಬಂಧಪಟ್ಟ ಕಾನೂನು ಇರಬಹುದು. ಸಕ್ಕರೆ ಫ್ಯಾಕ್ಟರಿಗೆ ಸಂಬಂಧಪಟ್ಟ ಕಾನೂನು ಇರಬಹುದು. ರಾಯಬಾಗ್ ಸಕ್ಕರೆ ಫ್ಯಾಕ್ಟರಿಗೆ ಸಂಬಂಧಪಟ್ಟಂತೆ, ಸಂಕೇಶ್ವರ ಸಕ್ಕರೆ ಕಾರ್ಖಾನೆಗೆ ಸಂಬಂಧಪಟ್ಟಂತೆ ಜನ ಅನೇಕ ವರ್ಷಗಳಿಂದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇವರು ರಾಜಕೀಯ ದಾರಿಯನ್ನು ತುಳಿಯುಲಿಲ್ಲವೆಂದು, ಸೇವೆಯಿಂದ ತೆಗೆದುಹಾಕತಕ್ಕಂತಹ ಕೆಲಸವನ್ನು ಮಾಡಿದ್ದಾರೆ. ಒಂದುವರೆ ತಿಂಗಳ ಮುಂಚೆ ಈ ವಿಚಾರ ಬಂದಾಗ ನಾನು ಮತ್ತು ಎಮ್. ಎಸ್. ಪಾಟೀಲ್‌ರವರು ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದಾಗ, ಬೆಳಗಾಂ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸತ್ಯಾಗ್ರಹ ಮಾಡುತ್ತೇವೆಂದು ತಿಳಿಸಿದಾಗ ಸಹಕಾರ ಮಂತ್ರಿಗಳಾದಂತಹ ಶ್ರೀಮಾನ್ ಚಾಲಪ್ಪನವರ ಗಮನಕ್ಕೆ ಈ ವಿಷಯವನ್ನು ತಂದ ಮೇಲೆ ಆ ನೌಕರರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿದರು. ವಿ.ಎಲ್. ಪಾಟೀಲ್‌ರ ಒತ್ತಡಕ್ಕೆ ಒಳಗಾಗಿ ತೆಗೆದುಹಾಕಿದ್ದ ನೌಕರರನ್ನು ಶ್ರೀಮಾನ್ ಚಾಲಪ್ಪನವರು ಮತ್ತೆ ಕೆಲಸಕ್ಕೆ ತೆಗೆದುಕೊಂಡರು, ಮತ್ತೆ ಕಳೆದ ವರ್ಷ ಇಂತಹ ಘಟನೆ ನಡೆದಿದೆ. ರಾಯಬಾಗ್ ಸಕ್ಕರೆ ಕಾರ್ಖಾನೆಯಲ್ಲಿ ಸುಮಾರು ೬೦ ಜನರನ್ನು ವಿ. ಎಲ್. ಪಾಟೀಲರ ಒತ್ತಡಕ್ಕೆ ಮಣಿದು ಮತ್ತೇ ಕೆಲಸದಿಂದ ತೆಗೆದುಹಾಕಿದ್ದಾರೆ. ಅವರು ಜನತಾ ಪಕ್ಷಕ್ಕೂ ಅಲ್ಲಾ, ಕಾಂಗ್ರೆಸ್ ಪಕ್ಷಕ್ಕೂ ಬೆಂಬಲ ಕೊಡತಕ್ಕಂತಹ ಜನ ಇಲ್ಲ. ಮತ್ತೆ ಅಲ್ಲಿರತಕ್ಕಂತಹ ಕೆರೆಯ ನೀರನ್ನು ಇವರ ಭೂಮಿಗೋಸ್ಕರ ಲೋಕೋಪಯೋಗಿ ಇಲಾಖೆಯ ಅನುಮತಿ ಇಲ್ಲದೆ ಆ ಭಾಗದ ದನಕರುಗಳಿಗೆ ಕುಡಿಯುವುದಕ್ಕೆ ನೀರು ಬಿಡದೆ ಕಳೆದ ನಾಲ್ಕೈದು ವರ್ಷಗಳಿಂದ ಸತತವಾಗಿ ಮಾನ್ಯ ಸಚಿವರ ಭೂಮಿಗೆ ಉಪಯೋಗಿಸಿಕೊಳ್ಳಲಾಗಿದೆ. ಇದರ ಬಗ್ಗೆ ದೂರು ಕೊಟ್ಟರೂ ಯಾರು ಕ್ರಮ ತೆಗೆದುಕೊಳ್ಳಲಿಲ್ಲ. ೧೯೮೩-೮೪ರಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಎಲೆಕ್ಟ್ರಿಕ್ ಪವರ್‌ಗೆ ಸಂಬಂಧಪಟ್ಟ ವಿಚಾರ ಇರಬಹುದು, ಕಾನೂನಿಗೆ ವಿರುದ್ಧವಾಗಿ ಪವರ್ ಕನ್‌ಷಮ್‌ಷನ್‌ನ್ನು ದುರುಪಯೋಗಪಡಿಸಿಕೊಂಡಂತಹ ಆಪಾದನೆ ವಿ. ಎಲ್. ಪಾಟೀಲ್‌ರವರ ಮೇಲೆ ಇದೆ.

ಇದರ ಜೊತೆಗೆ ಕರ್ನಾಟಕ ಭೂಸುಧಾರಣಾ ಕಾನೂನಿನ ಪ್ರಕಾರ ಯಾರು ಮೊದಲಿನಿಂದಲೂ ಗೇಣಿದಾರರಾಗಿದ್ದರೋ, ಅವರಿಗೆ ಜಮೀನು ಮಂಜೂರಾಯಿತು. ಈ ಗೇಣಿದಾರರುಕ್ಷಿತಮಗೇ ಈ ಜಮೀನು ಮಂಜೂರಾಗಬೇಕೆಂದು ಫಾರಂ ನಂ. ೭ರಲ್ಲಿ ಅರ್ಜಿ ಹಾಕಿದಾಗ. ಅದು ಅವರ ಹೆಸರಿಗೆ ಮಂಜೂರಾಯಿತು. ಲ್ಯಾಂಡ್ ಟ್ರಿಬ್ಯುನಲ್ ಆರ್ಡರ್ ಪ್ರಕಾರ ಬೆಕ್ಕೇರಿ ಗ್ರಾಮದಲ್ಲಿರುವಂತಹ ಸರ್ವೆ ನಂ. ೧೪೫, ೧೭೩, ೧೭೪, ೧೭೫ ರಲ್ಲಿ ಸುಮಾರು ೧೮ ಎಕರೆ, ೬ ಗುಂಟೆ ಜಮೀನು ಶ್ರೀಮತಿ ಅಕ್ಕಾತಾಯಿ ಎಂಬುವರಿಗೆ ಮಂಜೂರಾಯಿತು. ಸೆಕ್ಷನ್ ೪೮(ಎ) ಪ್ರಕಾರ ಇವರು ಫಾರಂ ನಂ. ೭ರಲ್ಲಿ ಅರ್ಜಿ ಹಾಕಿದಾಗ ೩೬ ಎಕರೆ ೧೨ ಗುಂಟೆ ಜಮೀನಿನ ಪೈಕಿ ೧೮ ಎಕರೆ, ೬ ಗುಂಟೆ ಜಮೀನು ಇವರಿಗೆ ಮಂಜೂರಾಯಿತು. ಇವರ ಯಜಮಾನರು ಈಗ ಇಲ್ಲ. ಅವರು ತೀರಿ ಹೋಗಿದ್ದಾರೆ, ಆದ್ದರಿಂದ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಲ್ಯಾಂಡ್ ಟ್ರಿಬ್ಯುನಲ್ ಕೋರ್ಟಿನಲ್ಲಿ ಆರ್ಡರ್ ಆಯಿತು. ಈ ರೀತಿ ಒಂದು ಸಲ ಜಮೀನು ಮಂಜೂರಾದ ಮೇಲೆ ಅವರ ಹಕ್ಕನ್ನು ಯಾರಾದರು ಮೊಟಕುಗೊಳಿಸಲು ಪ್ರಯತ್ನ ಮಾಡಿದರೆ, ಸರ್ಕಾರ ಸೂಕ್ತ ರಕ್ಷಣೆಯನ್ನು ಗೇಣಿದಾರರಿಗೆ ಕೊಡಬೇಕಾಗುತ್ತದೆ. ಆದರೆ ಈ ಕೇಸ್‌ನಲ್ಲಿ ಸರ್ಕಾರ ಯಾವ ರೀತಿಯ ರಕ್ಷಣೆಯನ್ನು ಸಹ ಕೊಟ್ಟಿಲ್ಲ. ಇದೇ ಕಾರಣದಿಂದ ಶ್ರೀಮತಿ ಅಕ್ಕಾತಾಯಿ ಮತ್ತು ಅವರ ಮಗನಾದ ರಾಜೇಂದ್ರ ಅವರು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ನಂತರ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಇವರ ಮೇಲೆ ಹೆದರಿಕೆ ಬೆದರಿಕೆಗಳು ಬಂದವು. ಈ ಬಗ್ಗೆ ಮೇಲ್ಮನೆಯಲ್ಲಿ ಸಹ ಚರ್ಚೆಯಾಗಿದೆ. ಒಬ್ಬ ಗೇಣಿದಾರರಿಗೆ ಕಾನೂನು ಪ್ರಕಾರ ಸಿಕ್ಕಿದ ಹಕ್ಕನ್ನು ಮೊಟಕುಗೊಳಿಸಲು ಮತ್ತು ಆ ಒಂದು ಹಕ್ಕು ಅವರಿಗೆ ಸಿಗದಂತೆ ಮಾಡಲು ಎಲ್ಲ ರೀತಿಯ ಪ್ರಯತ್ನಗಳೂ ನಡೆದಿವೆ. ಶ್ರೀಮತಿ ಅಕ್ಕಾತಾಯಿ ಮತ್ತು ಆಕೆಯ ಮಗನನ್ನು ಈ ಬಗ್ಗೆ ಬೆದರಿಸಿ ಎಲ್ಲಿಯೋ

ಬಚ್ಚಿಟ್ಟಿದ್ದಾರೆಂದು ಆಕೆಯ ಮಗಳಾದ ಮೀನಾಕ್ಷಿಯು ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಪಿಟಿಷನ್ ಸಹ ಹಾಕಿದ್ದಾರೆ. ಈ ರೀತಿಯಿಂದ ಒಬ್ಬ ಗೇಣಿದಾರರಿಗೆ ಕರ್ನಾಟಕ ಭೂಸುಧಾರಣಾ ಕಾನೂನಿನ ಪ್ರಕಾರ ಸಿಗುವಂತಹ ಹಕ್ಕನ್ನು ಬೇರೆಯವರು ಕಸಿದುಕೊಳ್ಳುವಲ್ಲಿ ಈ ಜನತಾ ಪಕ್ಷದ ಸರ್ಕಾರ ಶಾಮೀಲಾಗಿದೆ ಎಂದು ಹೇಳುತ್ತೇನೆ. ಇದರಿಂದ ಈ ಮಂತ್ರಿ ಮಂಡಲ ಯಾವ ರೀತಿ ಕೆಲಸ ಮಾಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನನ್ನದೊಂದು ಕ್ರಿಯಾಲೋಪವಿದೆ, ಏನೆಂದರೆ, ಮಾನ್ಯ ಬಂಗಾರಪ್ಪನವರು ನಿಯಮ ೬೯ ರ ಕೆಳಗೆ ಒಂದು ನೋಟೀಸನ್ನು ತಮಗೆ ಕೊಟ್ಟಿದ್ದಾರೆ. ಆದರೆ ಅವರು ನೋಟೀಸ್‌ನಲ್ಲಿರುವ ವಿಚಾರವನ್ನು ಬಿಟ್ಟು ಬೇರೆ ವಿಚಾರಗಳನ್ನು ತಮ್ಮ ಮುಂದೆ ಪ್ರಸ್ತಾಪ ಮಾಡುತ್ತಿದ್ದಾರೆ. ಇಲ್ಲಿ ಗೇಣಿದಾರರಿಗೆ ಸಂಬಂಧಪಟ್ಟ ವಿಚಾರ ನಿಯಮ ೬೯ರ ಕೆಳಗೆ ಬರುವುದಿಲ್ಲ. ಗೇಣಿದಾರರಿಗೆ ಜಮೀನು ಮಂಜೂರು ಮಾಡುವುದು ಅಥವಾ ಬಿಡುವುದು ಕ್ವಾಸಿ-ಜ್ಯುಡಿಷಿಯಲ್ ಮುಂದೆ ಬರುತ್ತದೆ ಇಲ್ಲಿಯ ತೀರ್ಮಾನ ಸರಿಯಾಗಿಲ್ಲವೆಂದು ಕಂಡುಬಂದರೆ ಸಂಬಂಧಪಟ್ಟವರು ಹೈಕೋರ್ಟಿಗೆ ಹೋಗುವುದಕ್ಕೂ ಸಹ ಅವಕಾಶವಿದೆ. ಇದರ ಜೊತೆಗೆ ಈ ಗೇಣಿದಾರರ ವಿಚಾರ ತುರ್ತು ವಿಚಾರ ಕೂಡ ಆಗುವುದಿಲ್ಲ ಆದ್ದರಿಂದ ಇದು ನಿಯಮ ೬೯ರ ಕೆಳಗೆ ಬರುವುದಿಲ್ಲ, ಇವರು ನೋಟೀಸ್‌ನಲ್ಲಿ ಹೇಳಿರುವುದಕ್ಕೂ ಮತ್ತು ಹೇಳುತ್ತಿರುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲ ಅವರು ಪ್ರಸ್ತಾಪ ಮಾಡುತ್ತಿರುವ ವಿಚಾರ ಈಗ ಸಭೆಯ ಮುಂದಿಲ್ಲ. ಆದ್ದರಿಂದ ಈ ಬಗ್ಗೆ ತಮ್ಮ ರೂಲಿಂಗ್ ಬೇಕು.

ಅಧ್ಯಕ್ಷರು.— ನೀವು ನೋಟೀಸ್‌ನಲ್ಲಿರುವುದನ್ನು ಮಾತ್ರ ಈಗ ಪ್ರಸ್ತಾಪ ಮಾಡಿ.

ಶ್ರೀ ಎಸ್. ಬಂಗಾರಪ್ಪ.— ಕೋರ್ಟಿಗೆ ಈ ವಿಚಾರ ಹೋಗಿರುವುದರಿಂದ, ಅಲ್ಲಿ ಯಾವ ರೀತಿ ತೀರ್ಮಾನವಾಗುತ್ತದೋ ಆಗಲಿ, ಆ ವಿವರಕ್ಕೆ ನಾನು ಹೋಗುವುದಿಲ್ಲ. ಅದು ನಮ್ಮ ಮುಂದಿರುವ ಪ್ರಶ್ನೆಯೂ ಅಲ್ಲ. ಆದರೆ ಅವರು ಹಾಕಿರುವಂತಹ ರಿಟ್-ಪಿಟಿಷನ್ ವಿತ್‌ಡ್ರಾ ಮಾಡಿಕೊಳ್ಳಬೇಕೆಂದು ಇವರು ತಮ್ಮ ಅಧಿಕಾರಿಗಳ ಮುಖಾಂತರ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಶ್ರೀಮತಿ ಅಕ್ಕೂತಾಯಿ ಮತ್ತು ಅವರ ಮಗನನ್ನು ಎಲ್ಲಿಟ್ಟಿದ್ದಾರೆ, ಯಾವ ರೀತಿ ಕರೆದುಕೊಂಡು ಹೋಗಿದ್ದಾರೆ ಎಂಬುದೆಲ್ಲಾ ಕೋರ್ಟಿನಲ್ಲಿ ತೀರ್ಮಾನವಾಗುತ್ತದೆ. ಅದು ನಮ್ಮ ಮುಂದಿನ ಪ್ರಶ್ನೆಯಲ್ಲ. ಆದರೆ ಅಧಿಕಾರಿಗಳನ್ನು ಇವರು ಏನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ, ಅದು ಹೈಕೋರ್ಟಿನ ಮುಂದೆ ವಿಚಾರಣೆಗೆ ಬರುವುದಿಲ್ಲ. ಆದುದರಿಂದ ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಶ್ರೀಮತಿ ಅಕ್ಕೂತಾಯಿಯವರನ್ನು ಯಾವ ರೀತಿ ಬಂಧನದಲ್ಲಿಟ್ಟಿದ್ದಾರೆಂಬುದನ್ನು ವಿಚಾರ ಮಾಡುವಂತಹ ಹಕ್ಕು ಈ ಸಭೆಗಿದೆ, ಈ ಮಾನ್ಯ ಮಂತ್ರಿಗಳ ಬಗ್ಗೆ ಹೇಳುವಂತಹ ಅನೇಕ ವಿಚಾರಗಳಿವೆ. ಆ ಬಗ್ಗೆ ಒಂದು ದೊಡ್ಡ ಕಾದಂಬರಿಯನ್ನು ಬರೆಯಬಹುದು. ಲೈಸೆನ್ಸ್ ಇಲ್ಲದೆ ಪಿಸ್ತೂಲ್ ಇಟ್ಟುಕೊಳ್ಳಬಹುದು, ಅಲ್ಲಿನ ಸಬ್-ಇನ್ಸ್‌ಪೆಕ್ಟರ್, ಡಿ.ವೈ.ಎಸ್ ಪಿ. ಹಾಗೂ ಹೆಡ್‌ಕಾನ್ಸ್‌ಟೇಬಲನ್ನು ಬೆದರಿಸಬಹುದು, ಹೀಗೆ ಏನೇನು ಬೇಕಾದರೂ ಇವರು ಮಾಡಬಹುದು. ಈಗಾಗಲೇ ಅಲ್ಲಿನ ಪೋಲಿಸ್ ಅಧಿಕಾರಿಗಳು ತಮ್ಮ ಮೇಲಿನ ಅಧಿಕಾರಿಗಳಿಗೆ ಪತ್ರ ಬರೆದು ಈ ಮಂತ್ರಿಗಳ ಬೆದರಿಕೆಯಿಂದ ತಾವು ಕೆಲಸ ಮಾಡುವುದೇ ಕಷ್ಟವಾಗಿದೆ ಎಂದು ತಿಳಿಸಿದ್ದಾರೆ. ಇಂಥಾದ್ದನ್ನೆಲ್ಲಾ ನಾವು ಇಲ್ಲಿ ಚರ್ಚೆ ಮಾಡಬಹುದಾಗಿದೆ. ಇಂತಹ ವಿಷಯಗಳು ಇಲ್ಲಿ ಚರ್ಚೆಯಾಗಲೇಬೇಕು. ಈಗಿನ ಮಂತ್ರಿಮಂಡಲದಲ್ಲಿರುವ ಒಬ್ಬರು ಸಚಿವರು ಇದರಲ್ಲಿ ಭಾಗಿಯಾಗಿದ್ದಾರೆ. ಈ ಸಚಿವರು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಚರ್ಚೆ ಮಾಡುವ ಹಕ್ಕು ನಮಗಿದೆ. ಯಾರು ಹೈಕೋರ್ಟಿನಲ್ಲಿ ರಿಟ್ ಹಾಕಿದ್ದಾರೆ, ಅವರ ಮೇಲೆ ಇವರು ತಮ್ಮ ಅಧಿಕಾರಿಗಳ ಮುಖಾಂತರ ಒತ್ತಡ ತರುವುದರ ಮೂಲಕ, ಅದನ್ನು ಹಿಂದಕ್ಕೆ ಪಡೆಯುವಂತೆ ಬೆದರಿಕೆ ಹಾಕುತ್ತಿದ್ದಾರೆ, ಇದನ್ನೆಲ್ಲಾ ಹೈಕೋರ್ಟಿನವರು ಚರ್ಚೆ ಮಾಡುವುದಕ್ಕಾಗುವುದಿಲ್ಲ. ನಾವು ಮಾಡಬೇಕಾಗುತ್ತದೆ. ಹೈಕೋರ್ಟಿನವರು ಎರಡು ಕಡೆಯವರ ವಾದ ಕೇಳಿ ಕೊನೆಗೆ ಒಂದು ತೀರ್ಮಾನ ಕೊಡುತ್ತಾರೆ. ಆದರೆ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮೌಲ್ಯಾಧಾರಿತ ರಾಜಕೀಯ ಮಾಡುವ ಈ ಸರ್ಕಾರ ಮೊದಲು ಇದರ ಚರ್ಚೆಗೆ ಒಪ್ಪಿಕೊಳ್ಳಬೇಕು. ಈಗ ಎಲ್ಲ ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ಇದಕ್ಕೆ ಒಪ್ಪಿಗೆ ಕೊಟ್ಟರೆ ನಾವು ಎಲ್ಲ ವಿವರಗಳನ್ನು ಕೊಡುತ್ತೇವೆ. ಆದ್ದರಿಂದ ತಾವು ಎಲ್ಲ ಕಾರ್ಯಕಲಾಪಗಳನ್ನು

ಮುಂದಕ್ಕೆ ಹಾಕಿ ಈ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಹಂತದಲ್ಲಿ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಮಾನ್ಯ ಅಧ್ಯಕ್ಷರೇ, ನಾನೂ ಸಹ ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅದಕ್ಕೆ ನನ್ನ ಸ್ನೇಹಿತರಾದಂಥ ಶ್ರೀ ಪಂಪಾಪತಿ ಅವರು, ಶ್ರೀ ಶಾನಪ್ಪನವರು, ಶ್ರೀ ಭೂಪತಿಯವರು ಸಹಿ ಮಾಡಿದ್ದಾರೆ, ಈ ವಿಚಾರ ಈಗ ಕೋರ್ಟಿನ ಮುಂದಿದೆ. ಅಲ್ಲಿ ವಿಚಾರಣೆ ನಡೆಯಲಿ. ಕೋರ್ಟಿನ ಮುಂದಿರುವ ವಿಚಾರದ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ನಮಗೆ ಮತ್ತು ನಮ್ಮ ಪಕ್ಷಕ್ಕೆ ಬಂದಿರುವಂತಹ ವರ್ತಮಾನದ ಪ್ರಕಾರ, ಪತ್ರಿಕೆಗಳಲ್ಲಿ ವರದಿಯಾಗಿರುವ ಪ್ರಕಾರ ಹಾಗೂ ಇನ್ನಿತರ ವರದಿಗಳ ಆಧಾರದ ಮೇಲೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಈ ಸರ್ಕಾರದಲ್ಲಿರುವಂಥ ಮಾನ್ಯ ಮಂತ್ರಿಗಳಾದ ಶ್ರೀ ಪಾಟೀಲ್ ಅವರೇ ಈ ದಿನ ಇಂತಹ ಅಕ್ರಮ ವ್ಯವಹಾರಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದರಲ್ಲೂ ಮುಖ್ಯವಾಗಿ ಯಾರು ಗೇಣಿದಾರರಿದ್ದಾರೆ, ಯಾರು ತಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕೆಂದು ಹೋರಾಟ ಮಾಡುತ್ತಿದ್ದಾರೆ, ಅಂತಹವರನ್ನು ಇವರು ಹೆದರಿಸುತ್ತಿದ್ದಾರೆ. ಅಕ್ಕೂತಾಯಿ ಎಂಬುವರು ಬೆಕ್ಕೇರಿ ಗ್ರಾಮದಲ್ಲಿ ಅನೇಕ ವರ್ಷಗಳಿಂದ ಇವರ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ ಈಗ ಅವರನ್ನು ಬಿಡಿಸಿ ಆ ಜಮೀನನ್ನು ವಶಪಡಿಸಿಕೊಳ್ಳಬೇಕೆಂದು ಮಾನ್ಯ ಸಚಿವರು ಅಥವಾ ಅವರ ಕಡೆಯವರು ಪ್ರಯತ್ನ ಮಾಡುತ್ತಿದ್ದಾರೆಂಬ ದೊಡ್ಡ ಆರೋಪ ಇದೆ. ಇದರ ಜೊತೆಗೆ ಮಾನ್ಯ ಬಂಗಾರಪ್ಪನವರು ಹೇಳಿದಂತೆ, ವಿದ್ಯುತ್ ಬಳಕೆ ಬಗ್ಗೆ, ನೀರಿನ ಬಳಕೆ ಬಗ್ಗೆ ಹಾಗೂ ಇನ್ನಿತರ ವಿಚಾರಗಳಲ್ಲಿಯೂ ಸಹ ಇವರು ಎಲ್ಲ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಿದ್ದಾರೆ. ಇರುವಂತಹ ನಿಯಮಗಳನ್ನೆಲ್ಲಾ ಉಲ್ಲಂಘನೆ ಮಾಡುತ್ತಿದ್ದಾರೆಂಬ ಆರೋಪ ಕೂಡ ಇದೆ. ಆದ್ದರಿಂದ ನಾವು ಇದನ್ನೆಲ್ಲಾ ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ,

ಇದರ ಬಗ್ಗೆ ತಾವು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಹೆಚ್ಚಿನ ವಿವರಗಳನ್ನು ಸಭೆಯ ಮುಂದಿಡುವುದಕ್ಕೆ ಅನುಕೂಲವಾಗುತ್ತದೆ. ಆದರೆ, ಇದನ್ನು ಬೇರೆ ಸದಸ್ಯರು ಮಾಡಿದ್ದರೂ ತಪ್ಪು ಯಾರೇ ಆಗಲಿ, ಜಮೀನ್ದಾರರೂ ಮಾಡಿದ್ದರೂ ತಪ್ಪು. ಆದರೆ, ಮಂತ್ರಿಯವರು ಇದರಲ್ಲಿ ಕೈಹಾಕಿರುವುದರಿಂದ, ಅದು ಅಕ್ಷಮ್ಯ ಅಪರಾಧವಾಗುತ್ತದೆ. ಆದ್ದರಿಂದ, ಇದರ ಬಗ್ಗೆ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳದಿದ್ದರೆ, ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ, ಎಲ್ಲರಿಗೂ ಕೆಟ್ಟ ಹೆಸರು ಬರುತ್ತದೆ. ಆ ಪ್ರದೇಶದಲ್ಲಿ ಯಾರೂ ಇರುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಮಂತ್ರಿಯವರು ಅಕ್ಕೂತಾಯಿ ಮತ್ತು ಮಾರುತಿ ಎಂಬುವವರನ್ನು ಕರೆದುಕೊಂಡು ಬಂದು ರೂಮಿನಲ್ಲಿ ಇಟ್ಟುಕೊಂಡಿದ್ದರೆಂದು ಗೊತ್ತಾಗಿದೆ. ಇದು ತುಂಬಾ ಗಂಭೀರವಾದ ವಿಷಯ. ಇದು ಸತ್ಯವಾಗಿದ್ದರೆ, ಇವರು ಮಂತ್ರಿಯಾಗಲಿಕ್ಕೆ ನಾಲಾಯಕ್ಕು ಆಗುತ್ತಾರೆ ಎಂಬ ಅಭಿಪ್ರಾಯಕ್ಕೆ ಬರಬೇಕಾಗುತ್ತದೆ. ಇವರ ಮೇಲೆ ಆರೋಪ ಇದೆ, ಇವರು ಆರೋಪಕ್ಕೆ ಉತ್ತರ ಕೊಡಬೇಕಾಗುತ್ತದೆ. ಇದರ ಬಗ್ಗೆ ಪುರಾವೆಗಳು ಬೇಕಾದಷ್ಟಿವೆ. ಮಾನ್ಯ ಸದಸ್ಯರ ಹತ್ತಿರವೂ ಕೂಡಾ ಸಾಕಷ್ಟು ಮಾಹಿತಿಯಿದೆ. ಇದರ ಬಗ್ಗೆ ಚರ್ಚೆಮಾಡುವ ಅವಕಾಶ ಮಾಡಿಕೊಟ್ಟರೆ, ಎಲ್ಲಾ ಮಾಹಿತಿಗಳನ್ನೂ ಸಭೆಯ ಮುಂದಿಡುವುದಕ್ಕೆ ಅವಕಾಶವಾಗುತ್ತದೆ. ಕಾನೂನನ್ನು ಉಲ್ಲಂಘಿಸಿ, ಬಡವರ ವಿರುದ್ಧವಾಗಿ ತೀರ್ಮಾನ ಮಾಡಿದ್ದಾರೋ, ಜಮೀನ್ದಾರರಿಗೆ ಅನುಕೂಲವಾಗುವ ಹಾಗೆ ತೀರ್ಮಾನ ಮಾಡಿದ್ದಾರೋ ಎಂಬ ಸತ್ಯಾಂಶ ಹೊರಗೆ ಬರಬೇಕಾದರೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂಬುದಾಗಿ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಸನ್ಮಾನ್ಯ ಅಧ್ಯಕ್ಷರೆ, ಇಂದು ಬಹು ದುರದೃಷ್ಟಕರವಾದಂತಹ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾದಂತಹ ಪ್ರಸಂಗ ಬಂದಿದೆ. ಮತ್ತು ಇದು ಬಹಳ ಜರೂರಾದ ಮತ್ತು ಸಾರ್ವಜನಿಕರ ಮನಸ್ಸಿನಲ್ಲಿ ಒಂದು ರೀತಿಯಲ್ಲಿ ಕೋಲಾಹಲ ಎಬ್ಬಿಸಿದಂತಹ ವಿಚಾರ. ಇವತ್ತು ಕೆಂಪು ಕಟ್ಟಡ ಮತ್ತು ಈ ಬಿಳಿ ಕಟ್ಟಡ ಇವು ಎರಡೂ ಈ ರಾಜ್ಯದಲ್ಲಿ ನ್ಯಾಯ ಕೊಡಬೇಕಾದಂತಹವುಗಳು. ಒಂದು ವ್ಯವಹಾರದ ಸಂಬಂಧವಾದಂತಹ ಮತ್ತು ನಮ್ಮ ತತ್ವಗಳ ಅಸ್ತಿತ್ವಕ್ಕೆ ಧಕ್ಕೆ ಬಂದು ಗಂಡಾಂತರಕಾರಿಯಾದ ಒಂದು ಪರಿಸ್ಥಿತಿ ಉದ್ಭವವಾಗಿರುವಂತಹ ವಿಷಯವನ್ನು ನಾವು ಇಲ್ಲಿ ಪಸ್ತಾಪ ಮಾಡಬೇಕಾಗುತ್ತದೆ, ನಿಲುವಳಿ ಸೂಚನೆಯನ್ನು ನಾವು ಕೊಟ್ಟಾಗ, ಈ ನಿಲುವಳಿ ಸೂಚನೆ ಎಷ್ಟು ಜರೂರು ಎಂದರೆ, ಬಾಕಿ ಕಾರ್ಯಕಲಾಪಗಳನ್ನು ಒತ್ತಟ್ಟಿಗೆ ಇಟ್ಟು, ಅದರ

ಬಗ್ಗೆ ಚರ್ಚೆ ಮಾಡಬೇಕಾದಂತಹ ಪ್ರಸಂಗ ಬಂದಿದೆ. ಇದು ಸಮರ್ಪಕವೂ ಆಗಿದೆ. ತಾವು ಸಹಜವಾಗಿ ಇದರ ಬಗ್ಗೆ ಪ್ರಶ್ನೆ ಮಾಡಬಹುದು. ಏಕೆಂದರೆ, ಕೆಂಪು ಕಟ್ಟಡದಲ್ಲಿ ಚರ್ಚೆಯಾಗತಕ್ಕಂತಹ ವಿಷಯವನ್ನು ಬಿಳಿ ಕಟ್ಟಡದಲ್ಲಿ ಮಾಡಬಾರದೆಂದು ಹೇಳಿದ್ದೀರಿ, ಅದಕ್ಕೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ನಾವು ಈ ವಿಚಾರದಲ್ಲಿ ತಮ್ಮ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಾನೂನಿನ ಇತಿಮಿತಿಯ ಪರಿಜ್ಞಾನ ಇಟ್ಟುಕೊಂಡೇ ನಾವು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇವೆ. ಕೌಲ್ ಅಂಡ್ ಶಖ್ಧಾರ್ ಹೇಳಿದ ಹಾಗೆ, ಸೂಕ್ಷ್ಮ ಪ್ರಶ್ನೆ ಬಂದಾಗಲೂ ಕೂಡ, ಸಬ್‌ಜುಡೀಸ್ ಆಗತಕ್ಕ ವಿಚಾರವಿದ್ದರೂ ಕೂಡ, ಎತ್ತಕೂಡದೆಂದು ಹೇಳಿಲ್ಲ. There may be Two Parts. ಆದರೆ, ಸಬ್‌ಜುಡೀಸ್ ಇರಬಹುದು. ಸಂಬಂಧಪಡದೇ ಇರತಕ್ಕಂತಹ ವಿಚಾರವನ್ನು ಪ್ರತ್ಯೇಕಿಸಿ, ಈ ಸದನದಲ್ಲಿ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬಹುದೆಂದು ಕೌಲ್ ಅಂಡ್ ಶಖ್ಧಾರ್ ಪುಸ್ತಕದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದನ್ನೆಲ್ಲಾ ಹೇಳುವುದಕ್ಕೆ ಸದನದ ಸಮಯ ಹೆಚ್ಚಾಗುತ್ತದೆ. ಆದುದರಿಂದ, ಈ ಸದನದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಸಂಪುಟದ ಒಬ್ಬ ಸದಸ್ಯರ ವಿಚಾರದಲ್ಲಿ ಪ್ರಶ್ನೆ ಬಂದಿದೆ. ಈ ಒಂದು ಪ್ರಕರಣದಲ್ಲಿ ಅವರು ಕಾರಣೀಭೂತರಾಗಿದ್ದಾರೆ. ಆದ್ದರಿಂದ, ಇದನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ಅವರ ಸಂಬಂಧೀಕರು ಅವರ ಊರಿನವರು ಇದ್ದರೆ, ಅದನ್ನು ಪ್ರತ್ಯೇಕಿಸಿ ; He is the respondent No. 1 in the Habeas Corpus Petition under Article 226 of Constitution of India. ಇಲ್ಲಿ ಭೂಮಿಗೆ ಸಂಬಂಧಪಟ್ಟಂತಹ ವಿವಾದಗಳಿವೆ. ಆ ವಿವಾದಗಳನ್ನು ತೀರ್ಮಾನ ಮಾಡಲಿಕ್ಕೆ ಕೋರ್ಟಿದೆ. ಭೂ ವಿವಾದದಲ್ಲಿ ಶ್ರೀ ವಿ. ಎಲ್. ಪಾಟೀಲ್‌ರವರು ಹಸ್ತಕ್ಷೇಪ ಮಾಡಿದ್ದಾರೆ. ಅದು ಸರಿಯೋ, ತಪ್ಪೋ ಅದನ್ನು ಚರ್ಚೆ ಮಾಡುವುದಕ್ಕೆ ಇಲ್ಲಿ ನಿಲುವಳಿ ಸೂಚನೆಯನ್ನು ತರಲಿಲ್ಲ. ಆದರೆ, ಪ್ರಸ್ತುತ ಅದಕ್ಕೆ ಹತ್ತಿರವಾದಂತಹ ವಿಚಾರ. ಕೋರ್ಟು ತೀರ್ಪು-ಕೊಟ್ಟ ಮೇಲೆ, ಕೋರ್ಟಿನ ವ್ಯವಹಾರ ನಡೆಯತಕ್ಕಂತಹ ಸಂದರ್ಭದಲ್ಲಿ ಅದರ ಹಿತಕ್ಕೆ ಕಾನೂನು ವ್ಯಾಪ್ತಿಯನ್ನು ಒಳಗೊಂಡು ವ್ಯವಹರಿಸುವುದಕ್ಕೆ ಕೂಡಾ, ಆತಂಕ ತರತಕ್ಕಂತಹ ವಿಚಾರ ಬಂದಾಗ, ಅದು ಕಾನೂನಿನ ಪ್ರಶ್ನೆಯಲ್ಲಿ ಬರುತ್ತದೆ. ರಕ್ಷಣೆ ಮಾಡತಕ್ಕಂತಹ ಪ್ರಶ್ನೆ ಬರುತ್ತದೆ. ಒಬ್ಬನಿಗೆ ಲಿಟಿಗೇಷನ್‌ನಲ್ಲೂ ಕೂಡ, ಕೋರ್ಟಿನ ಆವರಣದಲ್ಲಿ ರಕ್ಷಣೆ ಸಿಗಬೇಕು. ಕೋರ್ಟಿನ ಹೊರಗೆ ಬಂದಾಗ, ವ್ಯವಹಾರ ನಡೆಸುವುದಕ್ಕೆ ಸ್ವಾತಂತ್ರ್ಯ. ರಕ್ಷಣೆ, ನ್ಯಾಯ ಕಾನೂನಿನ ಪರಿಧಿಯೊಳಗೆ ಸಿಕ್ಕುತ್ತದೆ. ಇದನ್ನು ಕೊಡತಕ್ಕಂಥಾದ್ದು ಸರ್ಕಾರದ ಜವಾಬ್ದಾರಿ. ಸರ್ಕಾರದವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅಸಮರ್ಥರಾಗಿದ್ದಾರೆ. ಇವತ್ತು ಸಂಪುಟದ ಸದಸ್ಯರೊಬ್ಬರು ಪ್ರತ್ಯಕ್ಷವಾದ ಹಸ್ತಕ್ಷೇಪ ಮಾಡಿದ್ದಾರೆ. ನಾನು ಭೂಮಿಗೆ ಸಂಬಂಧಪಟ್ಟ ವಿಚಾರವನ್ನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಪರಿಸ್ಥಿತಿ ಏನಿದೆ, ಆ ಜಮೀನು ಮಾರುತಿ ನಾಯಕವಾಡಿ ಪರವಾಗಿ ಆಗಿದೆ. ಇವತ್ತು ಅವರು ತೀರಿಕೊಂಡಿದ್ದಾರೆ. ಆತನ ಹೆಂಡತಿ ವಿಧವೆ. ಅಕ್ಕೂಕ್ಕ ತಾಯಿಯ ಪರವಾಗಿ ಡಿಕ್ಲರೇಷನ್ ಕೊಟ್ಟಿದ್ದಾರೆ. ಒಕ್ಕಲುತನಕ್ಕೆ ಸಂಬಂಧಪಟ್ಟಂತೆ, ರೆವಿನ್ಯೂ ದಾಖಲೆಗಳು ಅಕ್ಕ್ಯಾತಾಯಿಯ ಹೆಸರಿಗೆ ಮತ್ತು ಮಾರುತಿ ಹೆಸರಿಗೆ ಬಂದಿವೆ. ಟ್ರಿಬ್ಯೂನಲ್‌ನಲ್ಲಿ ವಿರುದ್ಧವಾಗಿ ತೀರ್ಪು ಕೊಟ್ಟ ಮೇಲೆ, ಇದು ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದಿದೆ. ಹೈಕೋರ್ಟಿನಿಂದ ಇವರಿಗೆ ರಕ್ಷಣೆ ಕೊಡಬೇಕೆಂದು ಇಂಜಂಕ್ಷನ್ ಆರ್ಡರ್ ಮಾಡಿದ್ದಾರೆ. ಆಗ ಸನ್ಮಾನ್ಯ ವಿ. ಎಲ್. ಪಾಟೀಲ್‌ರವರು ರೆವಿನ್ಯೂ ಮಂತ್ರಿಗಳಾಗಿದ್ದರು. ಟೆನೆಂಟ್ ಪರವಾಗಿ ಹೈಕೋರ್ಟಿನವರು ಇಂಜಂಕ್ಷನ್ ಕೊಟ್ಟರೂ ಕೂಡ, ಇದನ್ನು ಜಾರಿಗೆ ತರತಕ್ಕಂಥಾದ್ದು ಕೋರ್ಟ್ ಅಲ್ಲ. ರೆವಿನ್ಯೂ ಅಧಿಕಾರಿಗಳು ಕೋರ್ಟಿನ ಆಜ್ಞೆಯನ್ನು ಅನುಷ್ಠಾನಕ್ಕೆ ತರಬೇಕು. ಕೋರ್ಟ್ ಆಜ್ಞೆ ಪ್ರಕಾರ, ಸಿಗತಕ್ಕಂತಹ ligielmate ಪ್ರೊಟೆಕ್ಷನ್ ಅನ್ನು ಕೋರ್ಟು ಕೊಡುವುದಕ್ಕೆ ಬರುವುದಿಲ್ಲ. ಫೀಲ್ಡಿನಲ್ಲಿರತಕ್ಕಂತಹ ಪೋಲೀಸ್ ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು, ಅಸಿಸ್ಟೆಂಟ್ ಕಮಿಷನ್‌ರವರು ರಕ್ಷಣೆ ಕೊಡಬೇಕು. ಆದರೆ, ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಜಮೀನ್ದಾರರಿಗೆ, ಮತ್ತು ಸಂಪುಟದ ಸಚಿವರಿಗೆ ರಕ್ಷಣೆ ಕೊಟ್ಟಿದ್ದಾರೆ. ಹೈಕೋರ್ಟಿನ ಆಜ್ಞೆಗೆ ವಿರುದ್ಧವಾಗಿ, ಸಬ್ ಇನ್‌ಸ್ಪೆಕ್ಟರ್ ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಮೆಮೋಗಳನ್ನು ಕೊಟ್ಟಿದ್ದಾರೆ. ಆ ಮೆಮೋಗಳನ್ನು ಕೂಡಾ ಹೈಕೋರ್ಟಿನಲ್ಲಿ ಹಾಜರುಪಡಿಸಲಾಗಿದೆ. ಚಿಕ್ಕೋಡಿ ಸಬ್ ಇನ್‌ಸ್ಪೆಕ್ಟರ್‌ರವರು ನಾವು ಮೆಮೋ ಕೊಟ್ಟಿದ್ದು ತಪ್ಪಾಯಿತು ; ವಿತ್‌ಡ್ರಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ಕೂಡಾ ಹೈಕೋರ್ಟಿಗ ಬಂದಿದೆ. ಇದು ಈಗ ಚರ್ಚೆಯಲ್ಲಿ ಸಬ್‌ಜುಡೀಸ್ ಆಗದೇ ಉಳಿದಿಲ್ಲ. ಆದರೆ ೨ ಮೆಮೋಗಳನ್ನು

ಹೈಕೋರ್ಟ್ ಆಜ್ಞೆಗೆ ವಿರುದ್ಧವಾಗಿ ಕೊಟ್ಟಂತಹ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿಲ್ಲ. ಅವರನ್ನು ಅಮಾನತ್ತಿನಲ್ಲಿಟ್ಟಿಲ್ಲ. ಯಾವುದೇ ವಿಚಾರಣೆಯನ್ನೂ ಮಾಡಿಲ್ಲ. ಇವತ್ತು ಇದರ ಬಗ್ಗೆ ರಾಯಭಾಗ್ ತಹಶೀಲ್ದಾರ್‌ರನ್ನು ರಿಸೀವರ್ ಆಗಿ ನೇಮಕ ಮಾಡಿದ್ದಾರೆ. ಅದನ್ನು ಮಾಡಿದ್ದು ಸರಿಯೋ, ತಪ್ಪೋ ಹೇಳುವುದಕ್ಕಾಗುವುದಿಲ್ಲ. ಆದರೆ, ರಿಸೀವರಾಗಿ ತಹಸೀಲ್ದಾರರನ್ನು ನೇಮಕ ಮಾಡಿದ ಮೇಲೆ, ಆ ಜಾಗವನ್ನು ಸ್ವಾಧೀನ ಮಾಡತಕ್ಕಂತಹ ಅಧಿಕಾರ ಅವರಿಗಿದೆ.

೧.೦೦ ಪಿ.ಎಂ.

ಅಧಿಕಾರವನ್ನು ತಹಸೀಲ್ದಾರರವರು ಚಲಾವಣೆ ಮಾಡಿಲ್ಲ. ಅದು ಡಿಸ್‌ಪ್ಯೂಟ್ ಜಾಗೆ. ಅದು ಸಂಪುಟ ಸದಸ್ಯರೊಬ್ಬರ ಸ್ವಾಧೀನದಲ್ಲಿದೆ. ಅವರ ಬಲಾತ್ಕಾರದಲ್ಲಿ ಉಳುಮೆ ಮಾಡಿದ್ದಾರೆ. ಕೋರ್ಟ್ ಕೊಟ್ಟಂತಹ ರಿಸೀವರ್ ಆಜ್ಞೆ ಪಾಲನೆ ಆಗಲಿಲ್ಲ. ತಾವು ಇದನ್ನು ಆಲೋಚನೆ ಮಾಡಬೇಕು. I am not discussing the matter.

ಅಧ್ಯಕ್ಷರು.—ಪಾಯಿಂಟ್ ಬಗ್ಗೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪಾಯಿಂಟ್ ಮೇಲೆ ಮಾತನಾಡುತ್ತಿದ್ದೇನೆ. ಯಾವಾಗ ಸಂಪುಟದ ಸದಸ್ಯರಿಗೆ ಅವರ ಸಂಬಂಧಿಕರಿಗೆ ಅನುಕೂಲವಾಗುವಂತಹ ಆಜ್ಞೆ ಸಿಗಲಿಲ್ಲವೋ, ಆಗ ಅವರ ದಾರಿ ಬದಲಾಯಿತು. ರಿಟ್ ಪಿಟಿಷನರ್ ಅಕ್ಕ ತಾಯಿಯವರನ್ನೇ ಹಿಡಿದು ಕೊಳ್ಳತಕ್ಕಂತಹ ಕಿಡ್‌ನ್ಯಾಪ್ ಮಾಡತಕ್ಕಂತಹ ಕೆಲಸ ಆಯಿತು. ಆದರ ಪ್ರಕಾರ ಪ್ರೈಮಾಫೇಸಿ......

(ಗೊಂದಲ)

SRI A. LAKSHMISAGAR.—I am on a point of order.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.—ಅವರ ಕಡೆ ಜನ ಇದ್ದರೆ, ನಮ್ಮ ಕಡೆ ಜನ ಏಳುತ್ತಾರೆ. ಇದನ್ನು ಸುತ್ತಿ ಸುತ್ತಿ, ಬಳಸಿ ಬಳಸಿ, ಬಹಳ ವಿವರಣಾತ್ಮಕ ಭಾಷೆಯನ್ನು ಉಪಯೋಗಿಸಿದರೂ ತಮ್ಮ ಮುಂದೆ ಕೊಟ್ಟಿರತಕ್ಕಂತಹ ನೋಟೀಸಿನ ಶಬ್ದಗಳ, ವಾಕ್ಯಗಳ ಅರ್ಥ ಏನು?

ಶ್ರೀ ಎಸ್. ಬಂಗಾರಪ್ಪ.—ಅದನ್ನು ಇಲ್ಲಿ ಹೇಳಿಯಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳುವುದನ್ನು ಲಾಲಿಸಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಮ್ಮ ನೋಟೀಸನ್ನು ಎಕ್ಸ್‌ಪ್ಲೈನ್ ಮಾಡಿದ್ದೇವೆ. ಅದಕ್ಕೆ ಅವಕಾಶ ತೆಗೆದುಕೊಂಡು ಮಾಡುತ್ತಿದ್ದೇವೆ. ಅದನ್ನು ಅಪೋಸ್ ಮಾಡುವುದಕ್ಕೆ ನೋಟೀಸ್ ಕೊಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮತ್ತೊಮ್ಮೆ ವಿನಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ. ನೋಟೀಸನ್ನು ವಿವರಿಸಿ ಹೇಳಲಿ. ಅವರಿಗೆ ಅಭ್ಯಾಸ ಇದೆ. ಇಷ್ಟರಲ್ಲಿ ಹೇಳಬೇಕಾದ್ದನ್ನು ಅಷ್ಟರಲ್ಲಿ ಹೇಳುತ್ತಾರೆ. ಅದಕ್ಕೆ ನನ್ನ ಆಕ್ಷೇಪ ಇಲ್ಲ, ಒಂದು ಶಬ್ದವನ್ನು ಸರ್ಕಸ್‌ಗೂ......

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮೌಲ್ಯಾಧಾರಿತ ರಾಜಕಾರಣ ಮಾಡಲು ಇಂತಹ ಮಂತ್ರಿಗಳನ್ನು ಇಟ್ಟುಕೊಂಡಿದ್ದೀರಿ, ನಿಮಗೆ ನಾಚಿಕೆ ಆಗಬೇಕು, ಗೂಂಡಾ ಆಕ್ಟ್ ಇಟ್ಟುಕೊಂಡಿದ್ದೀರಿ, ಆದರೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ. ಇಷ್ಟು ಇದುದ್ದನ್ನು, ಅಷ್ಟು ಹೇಳುತ್ತೇವೆಂದು ಹೇಳುತ್ತಿದ್ದೀರಿ. ಬಡವರ ಜೀವ ಹಿಂಡುತ್ತಿದ್ದಾರ. ಬೆಳಗಾಂ ಜಿಲ್ಲೆಗೆ ಹೋಗಿ ನೋಡಿದ್ದೀರಾ?

MR. SPEAKER.—The Chief Minister on his legs.

SRI S. BANGARAPPA.—He is also on his legs. But I am also on my legs. What is this?

(INTERRUPTION)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮಂತಹ ಶಿಷ್ಯರನ್ನು ಇಟ್ಟುಕೊಳ್ಳತಕ್ಕಂತಹ ದುರ್ದೈವ ನಮಗೆ ಬೇಡ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಂತಹ ಕೆಟ್ಟ ಗುರುಗಳನ್ನು ಇಟ್ಟುಕೊಳ್ಳತಕ್ಕಂತಹ ದುರ್ದೈವ ನಮಗೆ ಬೇಡ. ಅವರು ಅಭ್ಯಾಸವಾಗಿ ಹೋಗಿದೆ ಎಂದು ಹೇಳಿದರು. ಏನು ಅಭ್ಯಾಸವಾಗಿ ಹೋಗಿದೆ? There must be some limit.

ಅಧ್ಯಕ್ಷರು.—ಬಂಗಾರಪ್ಪನವರೆ, ಈ ರೀತಿ ಮಾಡುವುದು ಸರಿಯಲ್ಲ. ಸಭಾ ನಾಯಕರು ಹೇಳಲಿ ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ.—ನಾವು ಯಾವ ವಿಚಾರವನ್ನು ಹೇಳುತ್ತಿದ್ದೇವೆ. ಮೌಲ್ಯಾಧಾರಿತ ರಾಜಕಾರಣದಲ್ಲಿ ಇವರು ಮಹಾ ಪ್ರವೀಣರೇ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಧ್ಯದಲ್ಲಿ ಎದ್ದು ನಿಂತದ್ದು, ಒಂದೇ ಒಂದು ಮಾತನ್ನು ಹೇಳುವುದಕ್ಕೆ, ಮಾನ್ಯ ಮೊಯಿಲಿಯವರು ತಮ್ಮ ವಿವರಣೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಕಿಡ್ನಾಪ್ ಮಾಡಿದ್ದಾರೆಂದು ಹೇಳಿದರು. ಸಂಬಂಧಪಟ್ಟವರು ಕಿಡ್ನಾಪ್ ಬಗ್ಗೆ ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ರಿಟ್ ಪಿಟಿಷನ್ ಹಾಕಿದ್ದಾರೆ. ಅದು ಅಡ್ಮಿಟ್ ಆಗಿದೆ. ಸಂಬಂಧಪಟ್ಟವರಿಗೆ ನೋಟೀಸ್ ಹೋಗಿದೆ. ಅವರು ಹೈಕೋರ್ಟಿನಲ್ಲಿ ಪ್ರಾಕ್ಟೀಸ್ ಮಾಡುವುದಕ್ಕೆ ಪ್ರಾರಂಭ ಮಾಡಿದ್ದಾರಾ? ಹೈಕೋರ್ಟಿನಲ್ಲಿ ಒಂದು ವಿಚಾರ ವಿಚಾರಣೆಗೆ ಬಂದಿದ್ದಾಗ, ಇವರು ಜಡ್ಜ್‌ಮೆಂಟ್ ಕೊಡತಕ್ಕಂಥಾದ್ದು ಸರಿಯೇ? ಕಿಡ್ನಾಪ್ ಮಾಡಿದ್ದಾರೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಕಿಡ್ನಾಪ್ ಮಾಡಿದ್ದಾರೆಂದು ಅಲಿಗೇಷನ್ ಇದೆಯೆಂದು ಹೇಳಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ—ಕಿಡ್ನಾಪ್ ಮಾಡಿದ್ದಾರೆಂದು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ಕಿಡ್ನಾಪ್ ಯಾರು ಮಾಡಿದ್ದು? ನೀವು ನೋಡಿದ್ದೀರಾ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಮ್ಮ ಮುಂದೆ ಅರಿಕೆ ಮಾಡಿಕೊಂಡಿದ್ದೇನೆ. ಮತ್ತೊಂದು ಸಲ ಅರಿಕೆ ಮಾಡಿಕೊಳ್ಳುತ್ತೇನೆ. ಇಲ್ಲಿ ಡಿಬೇಟ್ ಆಗಬೇಕೆಂಬ ಉದ್ದೇಶ ಇದೆಯೋ ಅಥವಾ ಗಲಾಟೆ ಮಾಡಬೇಕೆಂಬ ಉದ್ದೇಶ ಇದೆಯೋ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧಿಕಾರ ದುರುಪಯೋಗ ಮಾಡಿರತಕ್ಕಂತಹ ಮಂತ್ರಿಗಳನ್ನು ಇಟ್ಟುಕೊಳ್ಳಬೇಕೆಂಬ ಉದ್ದೇಶ ನಿಮಗೆ ಇದೆಯೋ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಹತ್ತಿರ ಶಬ್ದಗಳಿಲ್ಲವೆಂದು ತಿಳಿದುಕೊಂಡಿದ್ದೀರಿ. ನಾವು ನಾಗರೀಕ ಭಾಷೆಯನ್ನು ಉಪಯೋಗಿಸಿದರೆ, ಅದಕ್ಕೆ ಉತ್ತರ ರೂಪವಾಗಿ ಬೈಗುಳ ಅವರು ಕೊಟ್ಟರೆ ಹೇಗೆ? ನಾಗರೀಕರು ಎಂದೂ ಅನಾಗರೀಕ ಭಾಷೆಯನ್ನು ಉಪಯೋಗಿಸಕೂಡದು.

ಶ್ರೀ ಎಸ್. ಬಂಗಾರಪ್ಪ.—ಅನ್‌ಪಾರ್ಲಿಮೆಂಟರಿ ವರ್ಡ್ಸ್, ಅನಾಗರೀಕ ಭಾಷೆಯನ್ನು ಪ್ರಯೋಗ ಮಾಡುವುದರಲ್ಲಿ ಇವರು ಪ್ರವೀಣರು. ಹಿಂದಿನ ರೆಕಾರ್ಡನ್ನು ತೆಗೆಯಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಸಬ್‌ಜುಡೀಸ್ ಇದೆ. ಅದು ಒಂದು. ನಿಲುವಳಿ ಸೂಚನೆಯನ್ನು ನಿಯಮ ೬೦ರ ಕೆಳಗಡೆ ತಂದಿರತಕ್ಕಂಥಾದ್ದು, ಇದನ್ನು ಎಂತಹ ಸಂದರ್ಭದಲ್ಲಿ ಇಲ್ಲಿ ತೆಗೆದುಕೊಳ್ಳಬಹುದೆಂದು ಅತ್ಯಂತ ಸ್ಪಷ್ಟವಾದಂತಹ ವಿವರಣೆಯು ರೂಲ್‌ನಲ್ಲಿ ಇದೆ,

i) A matter of urgent public importance. ಆಮೇಲೆ

ii) It should be of recent occurrence. ಇವೆರಡರಲ್ಲಿ ಇರಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅತ್ಯಂತ ಸಂಕ್ಷಿಪ್ತವಾದಂತಹ ಭಾಷಣದಲ್ಲಿ......

ಶ್ರೀ ಎಂ. ರಾಮಪ್ಪ.—ಇವತ್ತು ಉತ್ತರ ನಮಗೆ ಬೇಕಾಗಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಉತ್ತರ ಕೊಡುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಈ ಒಂದು ನಿಲುವಳಿ ಸೂಚನೆ ಕೆಲವೊಂದು ಕಂಡೀಷನ್‌ಗೆ ಒಳಪಟ್ಟಿದ್ದಾಗಿದೆ. ಯಾವುದಾದರೂ ವಿಚಾರವನ್ನು ಇಲ್ಲಿ ತರತಕ್ಕಂತಾದ್ದು ಸಾಧ್ಯವಿಲ್ಲ. ಅದು ಎತ್ತಲಿಕ್ಕೆ ಇತ್ತೀಚೆಗೆ ಆದ ಘಟನೆ ಮತ್ತು ಸಾರ್ವಜನಿಕರ ದೃಷ್ಟಿಯಿಂದ ಮಹತ್ವದ್ದಾಗಿರಬೇಕು. ಇಲ್ಲಿ ಏನು ಹೇಳಿದೆ ಎಂದರೆ,

> "Not more than one matter shall be discussed on the same motion."

ಇವರು ಕೊಟ್ಟಿರತಕ್ಕ ನೋಟೀಸಿನಲ್ಲಿ ಒಬ್ಬ ಮಹಿಳೆಯನ್ನು ಹೊತ್ತುಕೊಂಡು ಹೋಗಿದ್ದಾರೆಂದು ಹೇಳತಕ್ಕ ವಿಚಾರ ಮತ್ತು ಲ್ಯಾಂಡ್ ರಿಫಾರಮ್ಸ್ ಆಕ್ಟನ್ನು ಮೌಲ್ಯಧಾರಿತ ಮಂತ್ರಿ ಮಂಡಲದ ಒಬ್ಬ ಸದಸ್ಯರು ವಯಲೇಟ್ ಮಾಡಿದ್ದಾರೆ ಹಾಗೂ ಶುಗರ್ ಕಾಯಿದೆಯನ್ನು ವಯಲೇಟ್ ಮಾಡಿದ್ದಾರೆ ಮತ್ತು ಪ್ರಪಂಚದಲ್ಲಿರತಕ್ಕ ಎಲ್ಲಾ ಕಾಯಿದೆಯನ್ನು ಉಲ್ಲಂಘಿಸಿದ್ದಾರೆ ಎಂಬುದು. ಇದಕ್ಕೆ ಸಂಬಂಧಪಟ್ಟದ್ದು ಮಾತ್ರ ಹೇಳಬೇಕು. ಈ ವಿಚಾರದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಪರವಾನಿಗಿ ಸಿಕ್ಕಿದರೆ...

> "The motion shall be restricted to a specific matter of recent occurrence."

ಈಗ ಇದರಲ್ಲಿ ನೂರೆಂಟು ಸಂಬಂಧ ಇರಲಿ ಇಲ್ಲದೇ ಇರಲಿ, ವಿಷಯಗಳನ್ನು ತರುವುದಕ್ಕೆ ರೂಲ್ಸ್ ಪ್ರಕಾರ ಬರುವುದಿಲ್ಲ. ಕೊನೆಯದಾಗಿ .

> "The motion shall not deal with any matter which is under adjudication by a Court of Law having jurisdiction in any part of India"

ಕೇವಲ ನಮ್ಮ ಹೈಕೋರ್ಟಿನಲ್ಲಿ ಅಲ್ಲ. ದೆಹಲಿ ಹೈಕೋರ್ಟಿನಲ್ಲಿ ಒಂದು ವಿಚಾರ ನಡೆಯುತ್ತಿದ್ದರೂ ಅಲ್ಲಿ ಪೆಂಡಿಂಗ್ ಇದ್ದರೂ, ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಆಗಲೇ ಮಾನ್ಯ ಮೊಯ್ಲಿಯವರು ಹೇಳಿದಂತಹ ಮಾತು ರೆಕಾರ್ಡ್‌ಗೆ ಹೋಗ ಬಾರದು ತಾವು ರೆಕಾರ್ಡ್‌ನ್ನು ತರಿಸಿ ಆ ಪದಗಳನ್ನು ಕೈಬಿಡಬೇಕು. ಅದರಲ್ಲಿ ಇಂತಹವರನ್ನು ಕಿಡ್‌ನ್ಯಾಪ್ ಮಾಡಿದ್ದಾರೆಂದು ಆ ರೆಕಾರ್ಡ್‌ನಲ್ಲಿದ್ದರೆ ದಯವಿಟ್ಟು ಅದನ್ನು ತೆಗೆದುಹಾಕಬೇಕು.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ ಸನ್ಮಾನ್ಯ ಮುಖ್ಯ ಮಂತ್ರಿಯವರು ರೂಲನ್ನು ಉದ್ಧರಿಸಿ ಸ್ಪಷ್ಟೀಕರಣ ಕೊಟ್ಟಿದ್ದಾರೆ. ಅವರು ಉದ್ಧರಿಸಿದಂತಹ ಯಾವ ನಿಯಮಕ್ಕೂ ಆಕ್ಷೇಪಣೆ ಎತ್ತತಕ್ಕಂತಾದ್ದು ಏನಲ್ಲಾ. ಅದರ ಇತಿಮಿತಿಯನ್ನು ತಿಳಿದುಕೊಂಡೇ ಈ ವಿಚಾರವನ್ನು ಎತ್ತಲಿಕ್ಕೆ ನಾವು ನೋಟೀಸ್ ಕೊಟ್ಟಿದ್ದೇವೆ. ತಾವು ನಿಲುವಳಿ ಸೂಚನೆಗೆ ಅವಕಾಶವನ್ನು ದಯಮಾಡಿ ನೀಡಬೇಕಾಗಿದೆ. ಇದರಲ್ಲಿ ಪ್ರಾಸ್ತಾವಿಕವಾಗಿ ಏನು ಇದೆ ಅದರ ಬಗ್ಗೆ ವಿಷಯವನ್ನು ಎತ್ತಲಿಕ್ಕೆ ಅನುಮತಿಯನ್ನು ತಾವು ಕೊಡಬೇಕು. ಈ ವಿಷಯ ಎತ್ತತಕ್ಕಂತಹ ವಿಚಾರವೇ ಆಗಿದೆ. ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಏಕೆ ಹಾಕುತ್ತಾರೆ ? ಒಬ್ಬ ವ್ಯಕ್ತಿಯನ್ನು ಕಾನೂನು ಬಾಹಿರವಾಗಿ ಡಿಟೆನ್‌ಷನ್ ಮಾಡಿದಾಗ ಹೇಬಿಯಸ್ ಕಾರ್ಪಸ್ ಪ್ರಶ್ನೆ ಉದ್ಭವವಾಗುತ್ತದೆ. ಡಿಟೆನ್‌ಷನ್ ಮಾಡಿದ್ದಾರೆ ಎಂದರೆ, ಕಿಡ್‌ನ್ಯಾಪ್ ಮಾಡಿದ ಮೇಲೆ ತಾನೆ ಡಿಟೆನ್‌ಷನ್ ಮಾಡುವುದಕ್ಕೆ ಸಾಧ್ಯ ! ಅದರ ಬಗ್ಗೆ ರೆಕಾರ್ಡ್‌ನ್ನು ತರಿಸಿ ನೋಡುವುದು ಬಿಡುವುದು ಸರಿಯಲ್ಲ. ಅವರು ಕಿಡ್‌ನ್ಯಾಪ್ ಮಾಡಿದ್ದಾರೊ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಎತ್ತಿದ್ದೇವೆ. The substance of the very notice itself is kidnap and detention. Illegal detention means what ? It is in pursuance of kidnap. ಅಂತಹ ಆಪಾದನೆ ಅವರ ಮೇಲೆ ಇದೆ.

ಅಧ್ಯಕ್ಷರು.—ಚರ್ಚೆಗೆ ತೆಗೆದುಕೊಳ್ಳುವ ವಿಷಯ ರೀಸೆಂಟ್ ಆಗಿರಬೇಕೆಂದು ಸಭಾ ನಾಯಕರು ಹೇಳಿದ್ದಾರಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—We are trying to convince that. ಕ್ವೆಶ್ಚನ್ ಆಫ್ ವಿತ್‌ಡ್ರಾ ಏನು ಅದರಲ್ಲಿ ಇರುವುದಿಲ್ಲ. The very nature of adjournment motion is that. Of course, we are not directly making any allegation It does not lie in my mouth. That is the allegation. ಹೈಕೋರ್ಟ್‌ನಲ್ಲಿ ರಿಟ್ ಪಿಟಿಷನ್ ಫೈಲ್ ಆಗಿದೆ, ರಿಟ್ ಪಿಟಿಷನ್ ಅಡ್‌ಮಿಟ್ ಆಗಿದೆ. Notices have been issued.

ಶ್ರೀ ರಾಮಕೃಷ್ಣ ಹೆಗಡೆ.—ರಿಟ್ ಪಿಟಿಷನ್ ಫೈಲ್ ಆಗಿತ್ತು. ಅಡ್‌ಮಿಟ್ಟೂ ಆಗಿತ್ತು, ಈಗ ಅದು ಡಿಸ್‌ಮಿಸ್ಸೂ ಆಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದನ್ನೇ ನಾನು ಹೇಳುತ್ತಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹಿಂದೆ ಹೈಕೋರ್ಟಿನಲ್ಲಿ ಯಾವ ರಿಟ್ ಪಿಟಿಷನ್ ಹಾಕಿದ್ದರೋ ಅದನ್ನು ಡಿಸ್‌ಮಿಸ್ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವರಿಗೆ ಲೇಟೆಸ್ಟ್ ಇನ್‌ಫರ್‌ಮೇಷನ್ ಗೊತ್ತಿಲ್ಲ. ಅದನ್ನು ನಾನು ಹೇಳುತ್ತೇನೆ. I am informing you the latest. Now you will have to step in. In this, there is a prima facie case, No High Court will admit Writ Petition just without any grounds. Notices have been issued.

ಶ್ರೀ ರಾಮಕೃಷ್ಣ ಹೆಗಡೆ.—ಹೇಬಿಯಾಸ್ ಕಾರ್ಪಸ್ ರಿಟ್ ಪಿಟಿಷನ್ ಹಾಕಬೇಕಾದ್ದಿಲ್ಲ. ಒಂದು ಕಾರ್ಡಿನ ಮೇಲೆ ಕೋರ್ಟಿಗೆ ಬರೆದರೂ ಸಾಕು ಕೇಸ್‌ನ್ನು ಅಡ್‌ಮಿಟ್ ಮಾಡಿಕೊಳ್ಳುತ್ತಾರೆ. ಅದಕ್ಕೆ ಯಾರು ವಕೀಲರೂ ಬೇಕಾಗಿಲ್ಲ. ಅದಕ್ಕಾಗಿ ಇದನ್ನು ಪ್ರೈಮಾಫೇಸಿ ಕೇಸ್ ಎಂದು ಹೇಳಬೇಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಒಂದು ಕಾಗದದಲ್ಲಿ ಬರೆದು ಕೊಟ್ಟ ಕೂಡಲೇ ಹೈಕೋರ್ಟ್ ರಿಟ್‌ಪಿಟೀಷನ್‌ನ್ನು ಅಡ್‌ಮಿಟ್ ಮಾಡುತ್ತಾರೆಂದು ಹೇಳಿದರೆ ಆ ವಾದವನ್ನು ನಾನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಇದನ್ನು ಸುಪ್ರೀಮ್ ಕೋರ್ಟಿನಲ್ಲಿ ಮಾಡಬಹುದು. But they have to be convinced before admitting it. Then only they will issue notice. Writ petition has been admitted in 57/85. That was heard and admitted. Notices were issued. Sri V.L.Patil, Minister in charge of Social Welfare is respondent number one. ತಮಗೆ ಗೊತ್ತಿದೆ. ಕೇರಳಾದಲ್ಲಿ ಎಲೆಕ್ಟ್ರಿಸಿಟಿ ಸಚಿವರಾದ ಬಾಲಕೃಷ್ಣಪಿಳ್ಳೆಯುವರ ಮೇಲೆ ಒಂದು ರಿಟ್ ಪಿಟಿಷನ್ ಅಡ್‌ಮಿಟ್ ಆಗಿದ್ದುದು ಮಾತ್ರ, ಅದಕ್ಕೆ ಅವರು ರಾಜೀನಾಮೆಯನ್ನು ಕೊಟ್ಟು ಹೊರಟು ಹೋಗಿದ್ದಾರೆ.

SRI A. LAKSHMISAGAR.—If somebody files writ petitions against all the Ministers, the moment they are admitted, should all of us resign ?

SRI M. VEERAPPA MOILY,—It is most unfortunate that we have to hear suh an argument from the Law Minister,

SRI A. LAKSHMISAGAR.—I am really sorry that you are making a ridiculous statement.

SRI M. VEERAPPA MOILY.—Here is an Hon. law Minister who intends to ridicule the admissions made in the High Court. This is a serious matter and it is for the Law Minister to say that any petition will be admitted and notices will be given by the High Court. If this is the tone of the Law Minister, what will be...

SRI A. LAKSHMISAGAR.—The moment Writ Petitions are admitted should all Ministers resign ? Umpteen number of Writ Petitions have been filed and admitted.

SRI M VEERAPPA MOILY.—How the Law Department discharging its duties is very much in consonance with the tone of the Law Minister. This kind of an attitude has very much percolated in the whole administration of the Law Department which I am going to substantiate subsequently and not at time. It is not relevant now, Coming to the point, ಈ ನಿಲುವಳಿ ಸೂಚನೆಗೆ ನೋಟೀಸ್ ಏಕೆ ಕೊಟ್ಟಿದ್ದೇವೆಂದರೆ, ಸಂಪುಟದ ಒಬ್ಬ ಸದಸ್ಯರ ಮೇಲೆ ಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಕೇಸ್ ಹಾಕಿದ್ದಾರೆ. It is a question of propriety of that Minister continuing here. That fact is a matter of public importance ಶ್ರೀಮತಿ ಅಕ್ಕುತಾಯಿ ಅವರ ವಿಚಾರದಲ್ಲಿ ಹೇಬಿಯಸ್ ಕಾರ್ಪಸ್ ರಿಟ್‌ಪಿಟೀಷನ್ ಡಿಸ್‌ಮಿಸ್ ಆಗಿದೆಯೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಹೇಳಿದರು. ಅದು ಯಾವ ಗ್ರೌಂಡ್ ಮೇಲೆ ಆಗಿದೆಯೋ ಏನೋ ನನಗೆ ಗೊತ್ತಿಲ್ಲ. We have some information. Sri Arjun Naikwadi. one of the writ petitioner, has filed a complaint in the Vidhana Soudha Police Station about one hour back.

After presentation of Akkutai, I am now referring to what happened outside the court, the police surrounded here ; The men of the hon Minister surrounded her. Sri Arjun Naikwadi, who is respondent No. 2, who is a relative of Smt. Akkutai, has been assaulted.

(INTERRUPTION)

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ, ದಯವಿಟ್ಟು ನೀವು ಈಗ ವಿಷಯಕ್ಕೆ ಬರಬೇಕು.

SRI M. VEERAPPA MOILY.—It is pertaining to that case. That is why it gains importance. Protect the innocent citizens from the atrocities even if it is committed by the hon.Minister himself who is a part and parcel of the administration.

ಅಧ್ಯಕ್ಷರು.—ಮಾನ್ಯ ಮೊಯ್ಲಿಯವರೇ, ಅವರು ಹೇಳಿದ್ದನ್ನು ಸ್ವಲ್ಪ ಕೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಎಷ್ಟು ಸಾರಿ ಹೇಳುವುದು ?

ಅಧ್ಯಕ್ಷರು.— ತಾವು ಬೇಗನೇ ಮುಗಿಸಿ ಬಿಡಿ, ಈಗಾಗಲೇ ಮಾನ್ಯ ಬಂಗಾರಪ್ಪನವರು. ಎಂ. ಎಸ್. ಕೃಷ್ಣನ್‌ರವರು ಬಹಳ ಚೊಕ್ಕಟವಾಗಿ ಹೇಳಿದ್ದಾರೆ. ನೀವು ನೋಟೀಸ್‌ನಲ್ಲಿ ಏನಿದೆ ಅದರ ಪ್ರಕಾರ ಮಾತನಾಡಿರಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಶ್ರೀ ಎಂ, ವೀರಪ್ಪ ಮೊಯ್ಲಿ.—ಲಾ ಮಿನಿಸ್ಟರ್‌ರವರಿಗೆ ಈ ಸದನದ ಯಾವ ಕಾನೂನು ಅನ್ವಯ ಆಗುವುದಿಲ್ಲವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವೀರಪ್ಪ ಮೊಯ್ಲಿಯವರು...

ಶ್ರೀ ಕೆ. ಎಚ್. ಶ್ರೀನಿವಾಸ್.—ಪಾಯಿಂಟ್ ಆಫ್ ಆರ್ಡರ್ ಅಲ್ಲ ಇದು...

ಅಧ್ಯಕ್ಷರು.—ಕಾನೂನು ಮಂತ್ರಿಗಳು, ಮೇಲಾಗಿ ಸಂಸದೀಯ ಮಂತ್ರಿಗಳೂ ಆಗಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಮಾನ್ಯ ಮೊಯ್ಲಿಯವರು ಎಂದ ತತ್‌ಕ್ಷಣವೇ ಮಾನ್ಯ ಶ್ರೀನಿವಾಸ್‌ರವರು ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಎಂದು ಕೇಳುತ್ತಾರೆ. ಅವರು ಏತಕ್ಕಾಗಿ ಈ ರೀತಿಯ ತಕರಾರು ಹೇಳುತ್ತಾರೆ ಎಂದು ನನಗೆ ಗೊತ್ತಿಲ್ಲ.

ಶ್ರೀ ಕೆ. ಎಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ, ಹಿಂದೆ ಎರಡು ಪಾಯಿಂಟ್ ಆಫ್ ಆರ್ಡರ್ ಎತ್ತಿದರೂ ತಾವು ಆ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಏನೂ ಹೇಳಲಿಲ್ಲ. ಅಂದರೆ ಅದು ಪಾಯಿಂಟ್ ಆಫ್ ಆರ್ಡರ್ ಅಲ್ಲವೇ ?

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್‌ರವರೇ ಈಗ ನೀವು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ನನ್ನ ಪಾಯಿಂಟ್ ಆರ್ಡರ್ ಇಷ್ಟೇ. ಕೋರ್ಟಿನಲ್ಲಿ ವಿಚಾರಣೆಯಲ್ಲಿರತಕ್ಕಂತಹ ವಿಚಾರಗಳ ಬಗ್ಗೆ ಯಾವ ವಿಧವಾದಂತಹ ವಿಷಯಗಳನ್ನೂ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗಬಾರದು.

SRI S. BANGARAPPA.—That means we can discuss,

ಅಧ್ಯಕ್ಷರು.—ಬಂಗಾರಪ್ಪನವರೇ, ಬೇಗ ಮುಗಿಸಿರಿ, ಮೊಯ್ಲಿಯವರು ಮಾತನಾಡಲಿ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಪಾಯಿಂಟ್ ಆಫ್ ಆರ್ಡರ್‌ಗೆ ಗೌರವ ಕೊಡಬೇಕಲ್ಲ ? ಅದಕ್ಕೆ ತೆಗೆದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗತಾನೇ, ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದರು–ಹೇಬಿಯತ್ ಕಾರ್ಪಸ್ ಡಿಸ್‌ಮಿಸ್ ಆಗಿದೆ ಎಂದು, ಹಾಗೆಂದಮೇಲೆ ಅವರ ಹೇಳಿಕೆ ಪ್ರಕಾರ ವಿಷಯ ಕೋರ್ಟಿನಲ್ಲಿ ಇಲ್ಲ ಎಂದ ಹಾಗೆ ಆಯಿತು. ಈಗ ನಾವು ಎಲ್ಲಾ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡಿದ್ದೆವು ಎಂದು ಹೇಳಿದ ಹಾಗೆ ಆಯಿತು. ಈಗ ಎಲ್ಲಾ ಚಾನ್ಸ್ ತೆಗೆದುಕೊಳ್ಳುವುದಕ್ಕೆ ಅನುಕೂಲವಾಯಿತು. Therefore, we can now discuss it at length.

SRI A. LAKSHMISAGAR.—If the court has already decided it, it cannot be brought under Rule 59. It can be brought under some other rules.

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯ್ಲಿಯವರೇ ಹೇಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಮತ್ತು ಲಾ ಮಂತ್ರಿಯವರು ಹೇಳತಕ್ಕಂತಹ ವಾದದ ಪ್ರಕಾರ ನಿಲುವಳಿ ಸೂಚನೆಗೆ ಮತ್ತಷ್ಟು ಬಲ ಬಂತು. ನಾನು ಇದರಲ್ಲಿ ಎರಡು ಭಾಗಗಳು ಇವೆ ಎಂದು ತಿಳಿದುಕೊಂಡಿದ್ದೆ. ಒಂದು ಸಬ್‌ಜ್ಯೂಡಿಶಿಯಲ್, ಮತ್ತೊಂದು ಅದಕ್ಕೆ ಹೊರತಾಗಿದ್ದು ಎಂದು ಆದರೆ ಈಗ ಇರುವುದು ಒಂದೇ ಭಾಗ. ಅದನ್ನು ಭಾಕಿಯವರು ಹೇಳಿದ್ದಾಗೆ. ಅದನ್ನು ಪುನಃ ನಾನು ಉಚ್ಚರಿಸುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ. ಆರ್ಡರ್ ಬಂದಾಗ ಅಕಸ್ಮತಾಯಿ is again alleged to have been kidnapped. The matter is not befor the Court. It is before the police. The Home Minister will have to step in now. The Hon'ble Chief Minister will have to step in because an hon. Cabinet Minister is involved in this matter. ಆದುದರಿಂದ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಇದಕ್ಕಿಂತ ದೊಡ್ಡ ವಸ್ತು ಏನಿದೆ ? ಇವೊತ್ತು ಈ ಸದನದಲ್ಲಿ ಇಷ್ಟೊಂದು ಗಂಭೀರವಾದಂತಹ ವಿಚಾರ ಇರುವಾಗ, ಅದೂ ಕೂಡಾ ಎರಡು ಘಟ್ಟಗಳ ಮಧ್ಯೆ ನಡೆಯುತ್ತಿರುವಾಗ ಬೇರೆ ವಿಷಯಗಳನ್ನು ಏಕೆ ತೆಗೆದುಕೊಳ್ಳಬೇಕು ? ಬೇರೆ ಕಾರ್ಯಕಲಾಪಗಳನ್ನು ಏಕೆ ತೆಗೆದುಕೊಳ್ಳಬೇಕು ? ಯಾವ ಕಾನೂನನ್ನು ಪಾಸ್ ಮಾಡಿದರೂ ಅದರ ಮೂಲಕ ರಕ್ಷಣೆ ಇಲ್ಲದಿದ್ದರೆ ಹೇಗೆ ?

ಅಧ್ಯಕ್ಷರು.—ಸಭಾ ನಾಯಕರು ಓದಿ ಹೇಳಿದ್ದಾರಲ್ಲ, ಆ ಪ್ರಕಾರ ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಚೌಕಟ್ಟಿನಲ್ಲಿಯೇ ನಾನು ಮಾತನಾಡುತ್ತಿರುವುದು, ಆದುದರಿಂದ ಇದು ಬಹಳ ಪ್ರಾಮುಖ್ಯವಾದಂತಹ ವಿಚಾರವಾಗಿದೆ. If the hon.Minister has already submitted his resignation, we would not have argued. The hon.Minister is still there. The crime is perpetuated and is going on just before the eyes of this House and the Court. Who is to come to the rescue? ಆದುದರಿಂದ ನಿಲುವಳಿ ಸೂಚನೆಗೆ ಇದು ಬಹಳ ಪ್ರಾಮುಖ್ಯವಾದಂತಹದ್ದು, ಅಗತ್ಯವಾದಂತಹದ್ದು ಅದಕ್ಕಾಗಿ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದೂ ಮತ್ತು ಇದಕ್ಕೆ ಅನುಮತಿಯನ್ನು ಕೊಡಬೇಕೆಂದೂ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಮೂರು ನೋಟೀಸ್‌ಗಳು ಬಂದಿದೆ. ಮಾನ್ಯ ಸದಸ್ಯರುಗಳಾದ ಎಮ್. ಎಸ್. ಕೃಷ್ಣನ್, ವೀರಪ್ಪ ಮೊಯ್ಲಿ ಮತ್ತು ಬಂಗಾರಪ್ಪನವರು ಮಾತನಾಡಿದ್ದಾರೆ. ಈಗ ಎಲ್ಲರಿಗೂ ಅವಕಾಶವನ್ನು ಕೊಟ್ಟರೆ ನಾಲ್ಕು ದಿನಗಳು ಬೇಕಾಗುತ್ತದೆ. ಎಲ್ಲರ ವತಿಯಿಂದ ಮೇಲೆ ಹೇಳಿದ ಮಾನ್ಯ ಸದಸ್ಯರುಗಳು ನೋಟೀಸ್‌ಗೆ ಸಹಿ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬೇರೆ ಪಾಯಿಂಟನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಬೇರೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದನ್ನು ತಾವುಗಳು ತೆಗೆದುಕೊಳ್ಳಿ. ಅವರು ಏನು ಹೇಳುತ್ತಾರೆಂದು ನಾನೇ ಬೇಕಾದರೆ ಹೇಳುತ್ತೇನೆ. ಅವರು ಪುನಃ ಹೇಳುವುದು ಬೇಡ.

ಶ್ರೀ ಎ. ಲಕ್ಷ್ಮೀಸಾಗರ್.—ಅವರೇ ಹೇಳಲಿ. ವಿಷಯವನ್ನು ಅಲ್ಲಿಗೆ ನಿಲ್ಲಿಸೋಣ.

ಅಧ್ಯಕ್ಷರು.—ಶ್ರೀನಿವಾಸ್‌ರವರು ಮಾತನಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ತಾವುಗಳು ಕೊಟ್ಟಿರುವ ಈ ಅವಕಾಶಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಈಗ ಮುಖ್ಯವಾಗಿರುವ ಒಂದೆರಡು ವಿಚಾರಗಳ ಬಗ್ಗೆ ಮಾತ್ರ ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ನನಗೂ ಅರಿವು ಇದೆ, ನಮ್ಮ ನಾಯಕರಾದ ಶ್ರೀಮಾನ್ ಬಂಗಾರಪ್ಪನವರು ಮತ್ತು ಮೊಯ್ಲಿಯವರು ಈ ಕುರಿತು ಸಾಕಷ್ಟು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ನಾನು ಅದನ್ನೇ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಈ ಸದನದ ಸಮಯವನ್ನು ಹಾಳು ಮಾಡುವುದರ ಬಗ್ಗೆ ನಮ್ಮ ಸಭಾನಾಯಕರಾದ, ಮಾನ್ಯ ಮುಖ್ಯಮಂತ್ರಿಗಳು ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಾ ಇದ್ದಾರೆ, ಈಗ ಇಲ್ಲಿ ಹಾಜರಿದ್ದಾರೆ. ಆದರೆ ಸ್ವತಃ ಅವರು ಹೆಚ್ಚಿನ ನಮಯವನ್ನು ಸದನದ ಹೊರಗಡೆ ಕಳೆಯುವುದರ ಮೂಲಕ ಈ ಸದನಕ್ಕೆ ಸಹಾಯ ಮಾಡುತ್ತಿದ್ದಾರೆ. ಹಾಗೆಯೇ ಇಲ್ಲಿ ಕುಳಿತುಕೊಂಡು ಫೈಲುಗಳಿಗೆ ಸಹಿ ಮಾಡುತ್ತಾ ಯಾವ ಮಾತನ್ನೂ ಕಿವಿಗೆ ಬೀಳಿಸಿಕೊಳ್ಳದೇ ಆ ಮೂಲಕ ನಮಗೆ ಸಹಾಯ ಮಾಡುತ್ತಾ ಇದ್ದಾರೆ.

೧-೩೦ ಪಿ. ಎಂ.

ಮಾನ್ಯ ಸಭಾನಾಯಕರು ಫೈಲ್‌ಗಳನ್ನು ನೋಡಿಕೊಂಡು ಫೈಲುಗಳ ವಿತರಣೆಯನ್ನು ಮಾಡುತ್ತಿದ್ದಾರೆ ಮತ್ತು ಈ ಸದನದಲ್ಲಿ ಇಷ್ಟು ಗೊಂದಲ ನಡೆಯುತ್ತಿದ್ದರೂ ಕೂಡ ಯಾವುದೇ ರೀತಿಯ ಹೇಳಿಕೆಯನ್ನು ಕೊಡದೆ ನಮಗೆ ಸಹಾಯ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಮತ್ತೆ ವಿಷಯವನ್ನು ಬೇರೆ ಕಡೆ ತೆಗೆದುಕೊಂಡು ಹೋಗುತ್ತಿದ್ದಾರೆ. ತಾವು ದಯಮಾಡಿ ವಿಷಯಂದ ಪ್ರಸ್ತಾಪಕ್ಕೆ ಬನ್ನಿ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಒಂದು ವಿಚಾರವನ್ನು ಬಹಳ ಗಂಭೀರವಾಗಿ ಪ್ರಸ್ತಾಪ ಮಾಡುವವನಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ ಮಾನ್ಯ ಶ್ರೀನಿವಾಸ್‌ರವರು ಯಾವ ರೀತಿಯಲ್ಲಿ ಕಾಲಹರಣ ಮಾಡುತ್ತಿದ್ದಾರೆಂದು ತಮಗೆ ಸಾಬೀತು ಮಾಡಿ ತೋರಿಸುತ್ತಿದ್ದಾರೆ.....

ಶ್ರೀ ಕೆ. ಹೆಚ್. ಶ್ರೀನಿವಾಸ್ — ಮಾನ್ಯ ಅಧ್ಯಕ್ಷರೇ ನಾನು ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡುವವನಿದ್ದೇನೆ. ಮತ್ತು ಆ ವಿಷಯವನ್ನು ಬಹಳ ಕಳಕಳಿಯಿಂದ ಕೂಡ ಪ್ರಸ್ತಾಪ ಮಾಡುವವನಿದ್ದೇನೆ. ಈ ದೇಶದಲ್ಲಿ ಕಾನೂನು ಇದೆ, ನಿಜ. ಕಾನೂನು ಇದೆ ಎಂದು ತಿಳಿದು ಜನರು ಬದುಕುತ್ತಿಲ್ಲ, ಜನರು ಸಲೀಸಾಗಿ ಬದುಕಬೇಕು. ಆಗ ಮಾತ್ರ ಕಾನೂನು ಉಳಿಯುತ್ತದೆ. ಅದೇ ರೀತಿಯಲ್ಲಿ ಈ ಸದನದ ಕಾರ್ಯಕಲಾಪಗಳು ನಡೆಸಬೇಕಾದರೂ ನಿಯಮಾವಳಿಗಳು ಇವೆ. ಆದರೆ ನಿಯಮಾವಳಿಗಳು ಇವೆಯೆಂದು ನಾವು ಚರ್ಚೆ ಮಾಡುವುದು ಅಲ್ಲ. ಚರ್ಚೆ ಹೇಗೆ ಯಾವ ರೀತಿಯಲ್ಲಿ ಮಾಡಬೇಕು ಎಂಬುದಕ್ಕೆ ನಿಯಮಾವಳಿಗಳು ಇವೆ. ಆ ವಿಷಯವನ್ನು ಗಣನೆಯಲ್ಲಿಟ್ಟುಕೊಂಡು ಮಾತನಾಡುತ್ತಿದ್ದೇವೆ. ಆದರೆ ಇಲ್ಲಿ ಪ್ರಶ್ನೆ ಇರುವುದೇನೆಂದರೆ ನಾವು ಒಂದು ನಿಲುವಳಿ ಸೂಚನೆಯನ್ನು ಈ ಸದನದಲ್ಲಿ ತಂದಿದ್ದೇವೆ. ಯಾರ ಬಗ್ಗೆ ? ಯಾವ ವಿಷಯದ ಬಗ್ಗೆ ತಂದಿದ್ದೇವೆಂದರೆ ಅದು ಬಹಳ ಮುಖ್ಯವಾದುದು. ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿ ಎರಡು ಸರ್ಕಾರಗಳು ಇಲ್ಲ. ಇರುವುದು ಒಂದೇ ಒಂದು ಸರ್ಕಾರ. ಅಥವಾ ಇಬ್ಬರು ಮುಖ್ಯಮಂತ್ರಿಗಳು ಇಲ್ಲ. ಇರುವುದು ಒಂದು ಸರ್ಕಾರದಲ್ಲಿ ಒಬ್ಬರೇ ಮುಖ್ಯಮಂತ್ರಿಗಳು. ಬೇರೆ ಮುಖ್ಯಮಂತ್ರಿಗಳು ಇಲ್ಲ. ಆ ಕಡೆಗೆ ಗೃಹ ಸಚಿವರು ಒಬ್ಬರೆ ಇರುವುದು. ಎಲ್ಲರಿಗೂ ಒಬ್ಬರೇ ಗೃಹ ಸಚಿವರು ಇಲ್ಲಿ ಇರುವುದು ಒಂದೇ ಸರ್ಕಾರ. ಪಕ್ಷಗಳ ಆಧಾರದ ಮೇಲೆ ಚುನಾವಣೆಗಳು ನಡೆಯಬಹುದು. ಚುನಾವಣೆಗಳಲ್ಲಿ ಅನೇಕ ಪೈಪೋಟಿಗಳು ನಡೆಯಬಹುದು. ಆದರೆ ಇಲ್ಲಿ ಪ್ರಶ್ನೆ ಇರುವುದು ಏನೆಂದರೆ ಮಾನ್ಯ ಸಚಿವರಾದಂಥ ಶ್ರೀಮಾನ್ ವಿ. ಎಲ್. ಪಾಟೀಲ ರವರ ಭಾಗದಲ್ಲಿ ಇತ್ತೀಚಿನ ದಿವಸಗಳಲ್ಲಿ ನಮಗೆ ಬರತಕ್ಕಂಥ ವರದಿಗಳನ್ನು ನೋಡಿದರೆ ಒಂದರ ಮೇಲೊಂದು ವರದಿಗಳು ಬರುತ್ತಿವೆ. ಅದರ ಪ್ರಕಾರ ವಿವಿಧ ರೀತಿಯಲ್ಲಿ ವಿವಿಧ ಹಂತಗಳಲ್ಲಿ ನಡೆಯುತ್ತಿವೆ ಎಂದು ಗೊತ್ತಾಗುತ್ತಿದೆ. ಇದರಿಂದ ಅಲ್ಲಿನ ಜನತೆಯು ಜೀವನ ಅವ್ಯವಸ್ಥೆಯಲ್ಲಿ ನಡೆಯುತ್ತಿದೆ. ಇವತ್ತು ಈ ಪ್ರಶ್ನೆ ಇರುವುದು ಏನೆಂದರೆ ಹೈಕೋರ್ಟಿನಲ್ಲಿ ಏನಾದರೂ ಒಂದು ಆರ್ಡರ್ ಆದರೆ ಆ ಆರ್ಡರ್ ಅನ್ನು ಯಾರು ಕಾರ್ಯಗತ ಮಾಡಬೇಕು ? ಸರ್ಕಾರ ಆ ಆರ್ಡರ್ ಅನ್ನು ಕಾರ್ಯಗತ ಮಾಡಬೇಕು. ಈ ಹಂತದಲ್ಲಿ ಕಾರ್ಯಗತ ಮಾಡುವವರು ಯಾರು ? ಅಲ್ಲಿರತಕ್ಕಂಥ ಅಸಿಸ್ಟೆಂಟ್ ಕಮಿಷನರ್‌ರವರು, ಅಲ್ಲಿರತಕ್ಕಂಥ ತಹಶೀಲ್ದಾರವರು, ಅಲ್ಲಿರತಕ್ಕಂಥ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ಸ್ ಕಾರ್ಯಗತ ಮಾಡಬೇಕು. ಸಾಧಾರಣವಾಗಿ ಆಯಾಯ ಭಾಗದ ಮಂತ್ರಿಗಳಿಂದ ಮೇಲೆ ಅವರ ಹಿಡಿತ ಅಲ್ಲಿರತಕ್ಕ ಅಧಿಕಾರಿಗಳ ಮೇಲೆ ಹತೋಟಿಯಲ್ಲಿರುತ್ತದೆ. ಮತ್ತು ಸಾಕಷ್ಟು ಮಂತ್ರಿಗಳ ಪ್ರಭಾವ ಕೂಡ ಇರುತ್ತದೆ. ಕೆಲವೊಂದು ಸಂದರ್ಭಗಳಲ್ಲಿ ಮಂತ್ರಿಗಳ ಮಾತನ್ನು ನಂಬಬೇಕಾಗುತ್ತದೆ. ಈಗ ನಮ್ಮ ಜಿಲ್ಲೆಯಲ್ಲಿ ಇಬ್ಬರು ಮಂತ್ರಿಗಳಿದ್ದಾರೆ. ಅವರು ಈಗ ಬೇರೆ ಪಕ್ಷದಲ್ಲಿರಬಹುದು, ಚುನಾವಣೆಯ ಸಂದರ್ಭದಲ್ಲಿ ಅವರು ನಾವು ಬೇಕಾದಷ್ಟು ಪೈಪೋಟಿ ನಡೆಸಿರಬಹುದು. ಈಗ ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಮತ್ತು ಶ್ರೀಮಾನ್ ಬಸವಣ್ಣಪ್ಪನವರು ನಮ್ಮ ಜಿಲ್ಲೆಯ ಮಂತ್ರಿಗಳು. ಅವರು ಯಾವುದಾದರೊಂದು ವಿಷಯವನ್ನು ಹೇಳಿದರೆ ಆ ಬಗ್ಗೆ ಅಧಿಕಾರಿಗಳು ಗಮನ ಕೊಡಬೇಕಾಗುತ್ತದೆ ಅದೇ ರೀತಿಯಲ್ಲಿ ಇವತ್ತು ಮಾನ್ಯ ಸಚಿವರಾದಂಥ ಶ್ರೀಮಾನ್ ವಿ. ಎಲ್ ಪಾಟೀಲ್‌ರವರ ಮೇಲೆ ಎರಡು ರೀತಿಯ ಆಪಾದನೆಗಳು ಇವೆ. ಆ ಎರಡು ಆಪಾದನೆಗಳು ಯಾವುವೆಂದರೆ ಮಂತ್ರಿಯಾಗಿ ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡಿದ್ದಾರೆಂಬುದು, ಎರಡನೆಯದಾಗಿ ವ್ಯಕ್ತಿಗತವಾಗಿ ತಮ್ಮ ಅಧಿಕಾರದ ಹತೋಟಿಯನ್ನು ಬಲಪಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿರುವುದು. ಆದರೆ ಇಲ್ಲಿ ಇರತಕ್ಕಂಥ ಮತ್ತೊಂದು ಪ್ರಶ್ನೆ ಏನೆಂದರೆ ಯಾರಿಗೆ ಸರ್ಕಾರದಿಂದ ರಕ್ಷಣೆ ಸಿಗಬೇಕೋ ಅವರಿಗೆ ರಕ್ಷಣೆ ಸಿಗಲಿಲ್ಲ. ತಮ್ಮ ಸರ್ಕಾರದವರು ಈಗ ವಿಧವೆಯರಿಗೆ ಮಾಸಾಶನ ಕೊಡುತ್ತಿದ್ದೀರಿ. ನಿಜವಾಗಿಯೂ ತಮಗೆ ಪುಣ್ಯ ಬರುತ್ತದೆ. ಈಗಿರುವಂತಹ ಪ್ರಶ್ನೆ ಏನೆಂದರೆ ಆಕೆ ವಿಧವಾ ಮಾಸಾಶನ ಪಡೆಯುವುದರ ಬದಲು ಆಕೆ ಬದುಕುವುದು ಕಷ್ಟವಾಗಿದೆ. ಈ ಬಗ್ಗೆ ಮಂತ್ರಿಗಳ ಪ್ರಭಾವ ಬೀರಿದ್ದಾರೆ. ಮಾನ್ಯ ಅಧ್ಯಕ್ಷರೇ ಒಂದು ಶತಕದ ಹಿಂದೆ ಕವಿ ಸೋಮೇಶ್ವರನು ಒಂದು ಮಾತನ್ನು ಹೇಳಿದ್ದಾನೆ. ಅದು ಏನೆಂದರೆ “ಹರಕೊಲ್ಲಲ್ ಪರಕಾಯ್ವನೆ” ಎಂದು. ಯಾರು ರಕ್ಷಣೆ ಮಾಡಬೇಕಾಗಿತ್ತೋ ಅವರೇ ಕೊಲ್ಲಲು ಪ್ರಯತ್ನ ಮಾಡಿದರೆ ಇನ್ನು ರಕ್ಷಣೆ ಮಾಡುವವರು ಯಾರು ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ‘‘ಹರಕೊಲ್ಲಲ್ ಪರಕಾಯ್ವನೆ’’ ಎಂದು ಇರಬೇಕು. ಅದನ್ನು ಸರಿಯಾಗಿ ಮಾನ್ಯ ಸದಸ್ಯರು ಹೇಳುತ್ತಿಲ್ಲ,

ಶ್ರೀ ಕೆ. ಹೆಚ್. ಶ್ರೀನಿವಾಸ್.— ನಾನು ನಿಮ್ಮಿಂದ ಪಾಠ ಕಲಿತುಕೊಳ್ಳಬೇಕಾಗಿಲ್ಲ. ತಾವೇನು ಎಲ್ಲವನ್ನು ತಿಳಿದವರಲ್ಲ. ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತೇವೆ ಯಾರು ರಕ್ಷಣೆ ಕೊಡಬೇಕಾಗಿತ್ತು ? ಸರ್ಕಾರ ರಕ್ಷಣೆ ಕೊಡಬೇಕಾಗಿತ್ತು. ಇಲ್ಲವೇ ಸರ್ಕಾರದ ಮಂತ್ರಿಗಳು ರಕ್ಷಣೆ ಕೊಡಬೇಕಾಗಿತ್ತು. ಇಲ್ಲ ಗೃಹ ಸಚಿವರು ರಕ್ಷಣೆ ಕೊಡಬೇಕಾಗಿತ್ತು. ಇಲ್ಲವೇ ಸರ್ಕಾರದ ಆಡಳಿತ ಯಂತ್ರ ರಕ್ಷಣೆ ಕೊಡಬೇಕಾಗಿತ್ತು. ಇವರು ಯಾರೂ ರಕ್ಷಣೆ ಕೊಡದೆ ಇದ್ದ ಪಕ್ಷದಲ್ಲಿ ಯಾರು ರಕ್ಷಣೆ ಕೊಡುವುದಕ್ಕೆ ಸಾಧ್ಯವಿದೆ ? ಇಂತಹ ಪರಿಸ್ಥಿತಿಯಲ್ಲಿ ನಾವು ಮಾನ್ಯ ಕಾನೂನು ಸಚಿವರಾದ ಶ್ರೀ ಲಕ್ಷ್ಮೀಸಾಗರ್‌ರವರ ಪುಸ್ತಕದ ಬದನೇಕಾಯಿಯನ್ನು ನೋಡಿಕೊಂಡು ಹೋಗುವುದಕ್ಕೆ ಬಂದಿಲ್ಲ. ಅವರು ಎಲ್ಲಿಯಾದರೂ ಕಾಲೇಜಿಗೆ ಹೋಗಿ ಈ ಮಾತನ್ನು ಹೇಳಲಿ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ಎಲ್ಲಿಯಾದರೂ ಭಾಷಣ ಮಾಡಿ ಇದು ಬೇಡವೆಂದು ಹೇಳಲಿ. ಆಗ ಈ ಎಲ್ಲಾ ಕಾನೂನು ಮತ್ತು ನಿಯಮಾವಳಿಗಳನ್ನು ತೆಗೆದುಹಾಕಿ ಬಿಡೋಣ. ತಾವು ಈ ವಾಖ್ಯಾನವನ್ನು ಬೇರೆ ಕಡೆ ಹೇಳಿದರೆ ನಡೆಯುತ್ತದೆ. ಅದು ಇಲ್ಲಿ ಹೇಳಿದರೆ ನಡೆಯುವುದಿಲ್ಲ

ಶ್ರೀ ಕೆ. ಹೆಚ್. ಶ್ರೀನಿವಾಸ್.— ಮಾನ್ಯ ಅಧ್ಯಕ್ಷರೇ ನಾನು ಹೇಳುತ್ತೇನೆ, ನಿಯಮಗಳಲ್ಲಿ ಇರತಕ್ಕಂಥ ವಿಷಯವನ್ನು ಯಾವ ಚೌಕಟ್ಟಿನ ಒಳಗೆ ಪ್ರಸ್ತಾಪ ಮಾಡಬೇಕು ? ಎಂಬುದು ಗೊತ್ತಿದೆ. ಆದರೆ ಗಂಭೀರವಾದ ವಿಷಯವನ್ನು ನಾವು ಈ ಸದನದಲ್ಲಿ ಚರ್ಚೆ ಮಾಡದಿದ್ದರೆ ವಿಧಾನ ಸಭೆಯಲ್ಲಿ ಚರ್ಚೆ ಮಾಡಿದಂತೆ ಆಗುವುದಿಲ್ಲ. ಅಂದಮೇಲೆ ಈ ವಿಧಾನಸಭೆ ಏತಕ್ಕೆ ಇರಬೇಕು ಎಂಬುದನ್ನು ಸರ್ಕಾರದವರು ತಮ್ಮ ಆತ್ಮ ಪರಿಶೋಧನೆಯನ್ನು ಮಾಡಿಕೊಳ್ಳಬೇಕು. ಇವತ್ತು ಸರ್ಕಾರದ ಮಂತ್ರಿಗಳು ಜನರ ರಕ್ಷಣೆ ಮಾಡದಿದ್ದರೆ ಮತ್ಯಾರು ಮಾಡಬೇಕು ? ಆ ವಿಧವೆ ದಿನಾಂಕ ೧೦–೬–೮೫ರಂದು ರಾಯಭಾಗ್ ಪೋಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರೂ ಸಹ ಇದುವರೆವಿಗೂ ಆಕೆಗೆ ಯಾವುದೇ ರೀತಿಯ ಪರಿಹಾರ ಸಿಕ್ಕಿಲ್ಲ. ನಾವು ಈ ಒಂದು ಹಿನ್ನೆಲೆಯಲ್ಲಿ ಗಮನಿಸಬೇಕಾಗುತ್ತದೆ. ಮತ್ತು ಈ ಬಗ್ಗೆ ನಾನು ಬೇರೆ ರೀತಿಯಲ್ಲಿ ಒಂದು ನೋಟೀಸ್ ಕೊಟ್ಟಿದ್ದೆ ಅದರ ಗತಿ ಏನಾಯಿತೋ ಗೊತ್ತಿಲ್ಲ. ಆಕೆಯ ಗತಿಯಾದಂತೆ ಆ ನೋಟಿಸ್ ಗತಿಯಾಯಿತೋ ಏನೋ, ಇಂತಹ ಒಂದು ಸಂದರ್ಭದಲ್ಲಿ ಒಬ್ಬ ಮಂತ್ರಿಗಳ ಮೇಲೆ ಮತ್ತು ತಮ್ಮ ಸರ್ಕಾರದ ಮಂತ್ರಿಮಂಡಲದ ಸದಸ್ಯರ ಮೇಲೆ ಗಂಭೀರವಾದ ಆಪಾದನೆ ಇದ್ದು ಅವರು ತಮ್ಮ ಭಾಗದಲ್ಲಿ ಪ್ರಭಾವಿ ರಾಜಕಾರಣಿಯಾಗಿ ತಮ್ಮ ವ್ಯಕ್ತಿಗತವನ್ನು ದ್ವೇಷವನ್ನು ಬೆಳೆಸಿಕೊಂಡು ಜನಗಳಿಗೆ ಯಾವುದೇ ರೀತಿಯ ರಕ್ಷಣೆ ಸಿಗುತ್ತಿಲ್ಲ ಅಲ್ಲಿನ ಜನಜೀವನ ಅವ್ಯವಸ್ಥೆ ರೀತಿಯಲ್ಲಿ ನಡೆಯುತ್ತಿದೆ. ಇಂತಹ ಆಪಾದನೆಗಳು ಅವರ ಮೇಲೆ ಇವೆ. ಆ ಆಪಾದನೆಗಳು ಸತ್ಯಕ್ಕೆ ದೂರವಾದವುಗಳು ಎಂದು ಆದರೆ ನಮಗೆಲ್ಲಾ ಬಹಳ ಸಂತೋಷ, ಮಾನ್ಯ ಸಚಿವರಾದ ವಿ. ಎಲ್. ಪಾಟೀಲ್‌ರವರ ಬಗ್ಗೆ ನನಗೆ ಹೆಚ್ಚು ಪ್ರೀತಿ ಇದೆ......

ಶ್ರೀ ವಿ.ಎಲ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ನನ್ನ ಮೇಲೆ ಪ್ರೀತಿ ಇದೆ. ಮಾನ್ಯ ಸದಸ್ಯರು ನನ್ನನ್ನು ಜನತಾ ಪಕ್ಷದಿಂದ ಕಾಂಗ್ರೆಸ್ ಪಕ್ಷಕ್ಕೆ ಬನ್ನಿ ನಿಮಗೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಮತ್ತು ನಿಮ್ಮನ್ನೇ ಮುಖ್ಯಮಂತ್ರಿಗಳಾಗಿ ಮಾಡುತ್ತೇವೆಂದು ಸುಮಾರು ೩–೪ ಸಾರಿ ರಾಯಕರ ಎಂಬ ವಕೀಲರ ಮನೆಯಲ್ಲಿ ಮಾತುಕತೆ ಮಾಡಿದ್ದರು.......

(ಗೊಂದಲ)

ಶ್ರೀ ಕೆ. ಹೆಚ್. ಶ್ರೀನಿವಾಸ.— ಮಾನ್ಯ ಮಂತ್ರಿಗಳಿಗೆ ಕಾನೂನು ಗೊತ್ತಿಲ್ಲ...... ಮಾನ್ಯ ಮಂತ್ರಿಗಳು ಇಂತಹ ಸ್ಟೇಟ್‌ಮೆಂಟ್ ಏತಕ್ಕೆ ಕೊಡುತ್ತಾರೋ ನನಗಂತೂ ಗೊತ್ತಿಲ್ಲ.

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಬೇಕು.

ಶ್ರೀ ವೇದಾಂತ ಹೆಮ್ಮಿಗೆ.— ಮಾನ್ಯ ಅಧ್ಯಕ್ಷರೇ......

ಅಧ್ಯಕ್ಷರು.—ಮಾನ್ಯ ಹೆಮ್ಮಿಗೆಯವರೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಬಹಳ ಗುರುತರವಾದ ಆಪಾದನೆಯನ್ನು ಮಾಡಿದ್ದಾರೆ, ಆ ಆಪಾದನೆಯಾದರೂ ಏನೆಂದರೆ ನನಗೆ ಶ್ರೀ ಕೆ. ಹೆಚ್. ಶ್ರೀನಿವಾಸ್ ರವರು ಒಂದು ಕೋಟಿ ರೂಪಾಯಿಗಳನ್ನು ಕೊಡಲು ಬಂದಿದ್ದರು ಎಂದು. ಯಾರು ಯಾರಿಗೆ ಒಂದು ಕೋಟಿ ರೂಪಾಯಿಗಳನ್ನು ಯಾವಾಗ ಕೊಡಲು ಬಂದಿದ್ದರು. ಅವರಿಗೆ ಆ ಒಂದು ಕೋಟಿ ರೂಪಾಯಿಗಳು ಎಲ್ಲಿಂದ ಬಂತು ? ಅದನ್ನು ಸ್ವಲ್ಪ ಸದನಕ್ಕೆ ತಿಳಿಸಿದರೆ ಒಳ್ಳೆಯದು.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸುಮಾರು ೩–೪ ಸಾರಿ ಕೇಂದ್ರದ ಒಬ್ಬ ಎಂ.ಪಿ.ಯವರು * * * ಹೋಟೆಲ್ ಅಶೋಕಕ್ಕೆ ಬಂದು ವ್ಯವಹಾರ ಮಾಡಿದ್ದು ಮಾನ್ಯ ಕೆ. ಹೆಚ್. ಪಾಟೀಲ್ ರವರಿಗೂ ಗೊತ್ತಿದೆ. ಅವರಿಗೆ ಗೊತ್ತಿಲ್ಲದ ವಿಷಯವಿಲ್ಲ .....

(ಗೊಂದಲ)

ಅಧ್ಯಕ್ಷರು.—ದಯಮಾಡಿ ಮಾನ್ಯ ಸದಸ್ಯರೆಲ್ಲರೂ ಕುಳಿತುಕೊಂಡರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಸಭೆಯ ಸದಸ್ಯರಲ್ಲದ ಒಬ್ಬ ವ್ಯಕ್ತಿಯ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ. ಆ ವ್ಯಕ್ತಿ ಈ ಸದನದ ಸದಸ್ಯರಲ್ಲ. ಆದ್ದರಿಂದ ತಾವು ಅದನ್ನು ಕಡತದಿಂದ ತೆಗೆಸಿ ಹಾಕಬೇಕೆಂದು ನನ್ನ ಪ್ರಾರ್ಥನೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಈ ಸಭೆಯಲ್ಲಿ ಇಲ್ಲದವರ ಹೆಸರು ಹೇಳಿದ್ದರೆ ಅದನ್ನು ತೆಗೆಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಸದನದಲ್ಲಿ ಇಲ್ಲದಿರುವವರ ಹೆಸರನ್ನು ಹೇಳಿರುವುದರಿಂದ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ನಿಮಗೆ ರೂಲ್ಸ್ ಗೊತ್ತಿಲ್ಲವೇ ? ಹುಡುಗಾಟ ಮಾಡಿದಹಾಗೆ ಮಾಡುತ್ತಿದ್ದೀರಲ್ಲ. ಸಭಾಧ್ಯಕ್ಷರು ಎದ್ದು ನಿಂತಾಗ ರೂಲ್ಸ್ ಪ್ರಕಾರ ಎಲ್ಲರೂ ಕುಳಿತುಕೊಳ್ಳುವುದನ್ನು ಕಲಿಯಬೇಕು. ಅವರಿಗೂ ಹೇಳುತ್ತಿದ್ದೇನೆ, ಇವರಿಗೂ ಹೇಳುತ್ತಿದ್ದೇನೆ. ಇಬ್ಬರಿಗೂ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಸಭೆಯಲ್ಲಿ ಯಾರು ಇರುವುದಿಲ್ಲ, ಅಂಥವರ ಹೆಸರನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಯಾರಿಗೂ ಅವಕಾಶ ಇಲ್ಲ. ಈ ಕಡೆಯವರಿಗೂ ಇಲ್ಲ. ಆ ಕಡೆಯವರಿಗೂ ಇಲ್ಲ ಸಭೆಯಲ್ಲಿ ಇಲ್ಲದಿರುವವರ ಹೆಸರನ್ನು ಎತ್ತಿದ್ದಾರೆ ಎಂದರೆ ಅದನ್ನು ಕಡತದಿಂದ ತೆಗೆದು ಹಾಕುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಅಭಿಪ್ರಾಯ ಹೇಳಲಿ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ತಮ್ಮ ಔಚಿತ್ಯಪೂರ್ಣವಾದ ರೂಲಿಂಗ್‌ಗೆ ನಾನು ವಂದನೆಗಳನ್ನು ಅರ್ಪಿಸುತ್ತೇನೆ. ಮಾನ್ಯ ವಿ. ಎಲ್. ಪಾಟೀಲ್‌ರವರು...

(ಗೊಂದಲ)

---

* ಅಧ್ಯಕ್ಷರ ಅಪ್ಪಣೆಯ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ

ಅಧ್ಯಕ್ಷರು.—ಮಾನ್ಯ ಕೆ. ಹೆಚ್. ಪಾಟೀಲರು ಏನೋ ಹೇಳುತ್ತಿದ್ದಾರೆ, ಹೇಳಲಿ. ಸಭೆಯಲ್ಲಿ ಹೆಸರನ್ನು ಇಲ್ಲದವರ ಮಾನ್ಯ ವಿ. ಎಲ್. ಪಾಟೀಲರು ಎತ್ತಿದ್ದರೆ, ಅದನ್ನು ಕಡತದಿಂದ ತೆಗೆದುಹಾಕುತ್ತೇನೆ ಎಂದು ಹೇಳಿದ್ದೇನೆ. ನಾನು ರೂಲಿಂಗ್ ಕೊಟ್ಟಿಲ್ಲ

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ವಿ. ಎಲ್. ಪಾಟೀಲರು ನನ್ನ ಹೆಸರನ್ನು ಇನ್‌ವಾಲ್ವ್ ಮಾಡಿರುತ್ತಾರೆ. ಮಾನ್ಯ ಮಂತ್ರಿಗಳು ಭಾರೀ ಸಿಟ್ಟಿಗೆ ಬಂದು, ತಾವು ಮಂತ್ರಿ ಇದ್ದೀನಿ ಎಂಬುದನ್ನು ಮರೆತರು. ಅವರು ಇನ್ನೂ ಗೌಡತನದಲ್ಲೇ ಇದ್ದಾರೆ. ನಾನು ಸುಮ್ಮನೆ ಕುಳಿತಿದ್ದೇನೆ. ಅದೇನೋ ಕೆ. ಹೆಚ್. ಪಾಟೀಲರಿಗೆ ಗೊತ್ತಿದೆ ಎಂದು ಹೇಳಿದರು. ಅವರ ಬಗ್ಗೆ ನನಗೂ ಬಹಳ ಗೊತ್ತಿದೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ನನ್ನ ಹೆಸರನ್ನು ಉಪಯೋಗ ಮಾಡಿ ದುಡ್ಡು ಕೊಡುವುದಕ್ಕೆ ಬಂದರು ಎಂದು ಹೇಳಿದ್ದಾರೆ. ನಾನು ದುಡ್ಡು ಕೊಟ್ಟು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇದೆಯೋ ? ನಾನು ಇವರನ್ನು ತೆಗೆದುಕೊಳ್ಳಲೇ ? ನೀವೇ ಹೇಳಿ ಸಭಾಧ್ಯಕ್ಷರೇ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ ನಿಮ್ಮ ಅಭಿಪ್ರಾಯ ಹೇಳಿ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ವಿಷಯಕ್ಕೆ ಸಂಬಂಧ ಇಲ್ಲದಿರತಕ್ಕ ವಿಚಾರವನ್ನು ಹೇಳಿ ಶ್ರೀನಿವಾಸ್ ಮಾನ್ಯ ರಾಯಕರ್‌ರವರ ಮನೆಗೆ ಬಂದಿದ್ದರು ಎಂದು ಏನೋ ಹೇಳಿದ್ದಾರೆ. ನಾನು ಹೇಳುವುದು ಬೇಡ ಎಂದು ಹೇಳುವುದಿಲ್ಲ. ಆದರೆ ಹೇಳಿದಮೇಲೆ ಅದನ್ನು ಸಬ್‌ಸ್ಟಾನ್‌ಶಿಯೇಟ್ ಮಾಡುವ ಶಕ್ತಿ ಇದೆಯೋ ಎಂದು ಕೇಳುತ್ತಿದ್ದೇನೆ. ಅಪ್ರಕೃತವಾಗಿರತಕ್ಕ ವಿಷಯಗಳ ಪ್ರಸ್ತಾಪ ಇಲ್ಲಿ ಅನಾವಶ್ಯಕ. ಸಂಬಂಧ ಇಲ್ಲದಿರತಕ್ಕ ವಿಚಾರ ಇದು. ಇದನ್ನು ಚರ್ಚೆ ಚರ್ಚೆ ಮಾಡೋಣವೇ ಮಾಡಬೇಕೆಂದರೆ, ಅದಕ್ಕೆ ಸ್ವಾಗತ ಅದನ್ನು ಬೇಡವೇ ಎನ್ನತಕ್ಕದ್ದು ಪ್ರಶ್ನೆ ಅಲ್ಲ.

ಶ್ರೀ ಸಿ. ಭೈರೇಗೌಡ.—ಮಾನ್ಯ ಶ್ರೀನಿವಾಸ್‌ರವರು ನಿಯಮಾವಳಿ ಬೇಡ ಎಂದು ಹೇಳುತ್ತಿದ್ದಾರೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದು ನಿಯಮಾವಳಿಗೋಸ್ಕರ ನಾವು ಇಲ್ಲಿ ಬಂದಿಲ್ಲ. ನಾವು ಕಾರ್ಯಕಲಾಪ ನಡೆಸುವುದಕ್ಕೆ ನಿಯಮಾವಳಿಗಳು ಸಹಾಯಕವಾಗಿವೆ ಎಂದು ಹೇಳಿದ್ದಾರೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾವು ಹೇಳಿದ್ದು ಅವರ ಟೇಪ್‌ರೆಕಾರ್ಡ್‌ನಲ್ಲಿ ಏನೇನೋ ರೆಕಾರ್ಡ್ ಆಗುತ್ತದೆ. ಅದಕ್ಕೆ ಏನು ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಶ್ರೀನಿವಾಸ್‌ರವರೇ ಬೇಗ ಮುಗಿಸಿ, ದಯವಿಟ್ಟು ನೀವು ವಿಷಯಕ್ಕೆ ಬನ್ನಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಪಾಯಿಂಟ್ ಬಿಟ್ಟು ಹೋಗಿಲ್ಲ. ಅದನ್ನು ಬಿಟ್ಟು ಹೋಗುವಂತೆ ಅವರೇ ಮಾಡಿದರು. ಅದು ಅವರ ಜವಾಬ್ದಾರಿ. ನಾನು ಒಂದು ಪ್ರಶ್ನೆ ತಮ್ಮ ಮೂಲಕ ಸಭಾ ನಾಯಕರನ್ನು ಕೇಳುತ್ತೇನೆ. ಮಾನ್ಯ ಸಚಿವರ ಮೇಲೆ ಅನೇಕ ಆಪಾದನೆಗಳು ಬರುತ್ತಿವೆ. ನನಗೆ ಅವರ ಮೇಲೆ ಪ್ರೀತಿ ಇದೆ. ವೈಯ್ಯಕ್ತಿಕ ದ್ವೇಷ ಇಲ್ಲ. ಆ ಆಪಾದನೆಗಳು ಸತ್ಯಕ್ಕೆ ದೂರವಾದರೆ ಬಹಳ ಸಂತೋಷ ನನಗೆ ಹೆಚ್ಚು ಸಂತೋಷವಾಗುತ್ತದೆ ಎಂಬ ಮಾತು ಹೇಳಿದರೆ ಅದರಲ್ಲಿ ಏನು ತಪ್ಪು ಹೇಳಿದ್ದೇನೆ ಸ್ವಾಮಿ ? ಅದನ್ನು ಹೇಳಿದರೆ ಅವರು, ಇಲ್ಲದೇ ಇರುವ ಕಾಗೆ ಗುಬ್ಬಿ ಕಥೆಯನ್ನು ಹೇಳಿದರೆ ಹೇಗೆ ? ಅವರ ಹತ್ತಿರ ಪುರಾವೆಗಳು ಇದ್ದರೆ, ಅವರು ತಮ್ಮ ಮೇಲೆ ಆಘಾತ ಬರುವವರೆಗೆ ಏತಕ್ಕೆ ಕಾಯ್ದುಕೊಂಡು ಕೂತಿದ್ದರು. ? ಅವರು ಮಂತ್ರಿಗಳು ಆಗಿದ್ದಾರೆ, ಅವರು ನನ್ನನ್ನು ಒಳಕ್ಕೆ ಹಾಕಿಸಬಹುದಾಗಿತ್ತಲ್ಲ. ಏತಕ್ಕೆ ಹುಡುಗಾಟಿಕೆ ಜಗಳ ಆಗುತ್ತದೆ ಎಂಬುದನ್ನು ಮಾನ್ಯ ಸಭಾನಾಯಕರು ತಿಳಿದುಕೊಳ್ಳಬೇಕು. ನಾನು ಅಲ್ಲದೇ ಇದ್ದ ಮಾತನ್ನು ಹೇಳಿದ್ದೇನೆಯೋ ? ಮಾನ್ಯ ಮಂತ್ರಿಗಳ ಮೇಲೆ ನನಗೆ ಪ್ರೀತಿ ಇದೆ, ವೈಯ್ಯಕ್ತಿಕ ದ್ವೇಷ ಇಲ್ಲ. ಅವರ ಮೇಲೆ ಗುರುತರವಾದ ಆಪಾದನೆಗಳು ಬರುತ್ತಿದ್ದು, ಇದು ಆತಂಕಕ್ಕೆ ಒಳಗು ಮಾಡುವ ವಿಷಯ. ಈ ಆಪಾದನೆಗಳು ಸತ್ಯಕ್ಕೆ ದೂರವಾದರೆ ಸಂತೋಷ ಎಂದು ಹೇಳಿದರೆ ಅದು ತಪ್ಪೆ ? ನಾನು ಅದನ್ನು ವ್ಯಂಗ್ಯವಾಗಿ

ಹೇಳಲಿಲ್ಲ. ಪ್ರಾಮಾಣಿಕವಾಗಿ ಈ ಮಾತನ್ನು ಹೇಳಿದರೆ, ಕಳ್ಳರ ಮನಸ್ಸು ಹುಳ್ಳಹುಳ್ಳಗೆ ಎಂದು ತಿಳಿದುಕೊಂಡು ನನ್ನ ಮೇಲೆ ಆಪಾದನೆ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಸಿ. ಭೈರೇಗೌಡ.—ಕಳ್ಳರನ್ನು ಕಂಡರೆ ಎಚ್ಚರಿಕೆಯಿಂದ ಇರಲೇ ಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲ ಕುಳಿತುಕೊಳ್ಳಿ. ಮಾನ್ಯ ಶ್ರೀನಿವಾಸ್‌ರವರೇ, ಏನಾದರೂ ಇತ್ಯರ್ಥಕ್ಕೆ ಬರಬೇಕೆಂದು ಹೇಳುತ್ತೀರೋ, ಬೇಡ ಎಂದು ಹೇಳುತ್ತೀರೋ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ ತಾವು ಸುಮ್ಮನಿದ್ದರೆ. ಮುಗಿಸಿಬಿಡುತ್ತೇನೆ. ಆದುದರಿಂದ ನಾನು ಇಷ್ಟು ಹೇಳುತ್ತೇನೆ. ಒಬ್ಬ ಮಂತ್ರಿಯ ಬಗ್ಗೆ ತುಂಬಾ ಗಂಭೀರವಾದ ಆಪಾದನೆಗಳು ಬಂದಿವೆ. ದಟ್ಟದಾರಿದ್ರ್ಯದ ಸ್ಥಿತಿಯಲ್ಲಿರತಕ್ಕ ಜನಗಳ ರಕ್ಷಣೆಯ ವಿಷಯಗಳು ಬಂದಾಗ, ನಿಯಮಗಳು ತಾಂತ್ರಿಕ ವಿಚಾರಗಳನ್ನು ಇಟ್ಟುಕೊಂಡು ಸದನ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳುವುದು ಸಾಧ್ಯವಿಲ್ಲ, ಅದು ಸಾಧುವೂ ಅಲ್ಲ. ಇದರ ಬಗ್ಗೆ ಸೂಕ್ತವಾದ ರೀತಿಯಲ್ಲಿ ಚರ್ಚೆಗೆ ಅವಕಾಶ ಕಲ್ಪಿಸಿಕೊಡಬೇಕಾದುದು ಯೋಗ್ಯ. ಸರಕಾರ ತಾಂತ್ರಿಕ ಅಡಚಣೆಗಳನ್ನು ಒಡ್ಡದೆ ಗಂಭೀರವಾದ ಚರ್ಚೆಗೆ ಇಲ್ಲಿ ಅವಕಾಶ ಮಾಡಿಕೊಡುವುದು ಸರಕಾರದ ದೃಷ್ಟಿಯಿಂದ ಸೂಕ್ತ ಎಂದು ಹೇಳುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಮಾನ್ಯ ಪಾಟೀಲ್ ಅವರೇ ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಎಂ. ಎಸ್. ಪಾಟೀಲ್.—ನಾನೂ ಹೇಳಬೇಕಾಗುತ್ತದೆ, ನಾನು ಆ ಜಿಲ್ಲೆಗೆ ಸಂಬಂಧಪಟ್ಟವನು

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ಮಾನ್ಯ ಬಂಗಾರಪ್ಪನವರೇ ತಾವು ದಯವಿಟ್ಟು ಅವರಿಗೆ ಹೇಳಿ

ಶ್ರೀ ಎಸ್. ಬಂಗಾರಪ್ಪ.—ಅವರು ಕೂಡಾ ರುಜು ಹಾಕಿರತಕ್ಕವರು, ಅದು ಒಂದು ಕಡೆ ಇರಲಿ. ಅಲ್ಲದೆ ಅವರು ಆ ಜಿಲ್ಲೆಯವರು...

ಅಧ್ಯಕ್ಷರು.—ಮುಂದೆ ಈ ವಿಚಾರದ ಬಗ್ಗೆ ನಾನು ಅನುಮತಿ ಕೊಟ್ಟ ನಂತರ ಇದು ಬರುತ್ತದೆ. ಆಗ ಅವರಿಗೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಬಹುದು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್......

(ಗೊಂದಲ)

ಅಧ್ಯಕ್ಷರು.—ಮಾನ್ಯ ಕೆ.ಹೆಚ್. ಶ್ರೀನಿವಾಸ್‌ರವರು ಹಿರಿಯ ಸದಸ್ಯರು, ಅವರಿಗೆ ಮಾತನಾಡಲು ಅವಕಾಶ ಕೊಟ್ಟೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶ್ರೀ ಮಲ್ಲಾರಿಗೌಡ ಪಾಟೀಲರು ಸ್ವಲ್ಪ ವಿಚಾರ ಹೇಳಲಿ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್......

ಶ್ರೀ ರಮೇಶ ಕುಮಾರ್.—ತಾವು ಅನುಮತಿ ಕೊಡದೇ ಹೋದರೂ ಸದಸ್ಯರು ಮೇಲೆ ಮೇಲೆ ಎದ್ದು, ಉದ್ಧಟತನದಿಂದ ಮಾತನಾಡುತ್ತಿದ್ದಾರೆ. ತಾವು ರೂಲಿಂಗ್ ಕೊಡಬೇಕು.

ಶ್ರೀ ಎಂ. ಎಸ್. ಪಾಟೀಲ್.—ನಾನೂ ಕೂಡ ಸಹಿ ಹಾಕಿದ್ದೇನೆ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ, ಮಾತನಾಡಬೇಕೇ ಅಥವಾ ಬೇಡವೇ ಎನ್ನುವುದಕ್ಕೆ ರೂಲಿಂಗ್ ಕೊಡುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್.—ನಾನು ಮಾತನಾಡಲು ಅವಕಾಶವಿಲ್ಲ ಎನ್ನುವುದಕ್ಕೆ ತಾವು ರೂಲಿಂಗ್ ಕೊಡಬೇಕು. ನಾನು ಕೂಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ,

(ಗೊಂದಲ)

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರು ಸಭಾ ನಾಯಕರು, ಅವರಿಗೆ ಅವಕಾಶ ಕೊಟ್ಟಿದ್ದೇನೆ. ತಾವೆಲ್ಲಾ ಕುಳಿತುಕೊಳ್ಳಿ. ವಿರೋಧಪಕ್ಷದ ನಾಯಕರು, ಸಭಾನಾಯಕರೂ ಇಬ್ಬರೂ ಹೇಳಲಿ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ ತಮಗೆ ಅಧಿಕಾರ ಇದೆ. ಈ ಮನೆಯ ಕಾರ್ಯಕಲಾಪಗಳನ್ನು ನಡೆಸುವ ಬಗ್ಗೆ ಇರತಕ್ಕ ಕಾನೂನನ್ನು ದಯಮಾಡಿ ಎನ್‌ಫೋರ್ಸ್ ಮಾಡಿ, ಇದನ್ನು ಕಂಟ್ರೋಲ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಸದಸ್ಯರು ಭಾಗವಹಿಸತಕ್ಕಂಥ ಹಕ್ಕು ಇದೆ. ನೋಟೀಸ್ ಒಂದು ಸಾರಿ ಕೊಟ್ಟಮೇಲೆ ಕೆಲವು ಸದಸ್ಯರು ಮಾತನಾಡುವಾಗ, ಒಬ್ಬ ಸದಸ್ಯರು ಹೇಳಿರತಕ್ಕ ವಿಷಯ ಬಿಟ್ಟು ಬೇರೆ ವಿಷಯ ಇದ್ದರೆ ಹೇಳಬಹುದೆಂಬ ಸಂಪ್ರದಾಯವನ್ನು ಇಟ್ಟುಕೊಂಡಿದ್ದೇವೆ. ಶ್ರೀನಿವಾಸ್‌ರವರು ಮಾತನಾಡಲಿ ಎಂದು ತಾವು ಅವಕಾಶ ಕೊಟ್ಟಿದ್ದೀರಿ. ಅವರು ಮಾತನಾಡಿದ ನಂತರ, ಮಲ್ಲಾರಿಗೌಡ ಪಾಟೀಲರಿಗೂ ಅವಕಾಶ ಕೊಡಬೇಕಾಗುತ್ತದೆ. ಏಕೆಂದರೆ ಅವರು ಅದೇ ಪ್ರದೇಶದಿಂದ ಬಂದಿರತಕ್ಕಂಥವರು. ಅವರು ಈ ದೃಷ್ಟಿಯಿಂದ ಮಾತನಾಡುತ್ತೇನೆಂದು ಹೇಳಿದ್ದಾರೆ. ಇವತ್ತು ಯಾರೇ ಮಾತನಾಡಲಿ, ಆ ಕಡೆ ಸದಸ್ಯರೂ ಕೂಡ ಇಂತಹ ನೋಟೀಸ್ ಕೊಟ್ಟು, ಸಹಿ ಮಾಡಿದ್ದರೆ ಅವರಿಗೂ ಅವಕಾಶ ಕೊಡಬೇಕು. ಮಾನ್ಯ ಮಲ್ಲಾರಿಗೌಡ ಪಾಟೀಲರು ನೋಟೀಸ್‌ಗೆ ಸಹಿ ಹಾಕಿರುವ ಪ್ರಶ್ನೆ ಒಂದೇ ಅಲ್ಲದೆ ಅವರು ಆ ಪ್ರದೇಶದವರು. ಅವರು ಬೇರೆ ವಿಷಯಗಳನ್ನೂ ಕೂಡ ಪ್ರಸ್ತಾಪ ಮಾಡುತ್ತಾರೆ. ಆಗ ತಮಗೂ ಒಂದು ನಿರ್ಣಯ ತೆಗೆದುಕೊಂಡು ರೂಲಿಂಗ್ ಕೊಡುವುದಕ್ಕೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ತಾವು ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇಲ್ಲಿ ಕೊಡಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆಯಲ್ಲ. ಸಹಿ ಹಾಕಿರುವ ೨೫ ಜನಕ್ಕೂ ಅವಕಾಶ ಕೊಟ್ಟರೆ ಎಷ್ಟು ಹೊತ್ತು ಆಗುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ನಾನು ಎಲ್ಲರೂ ಮಾತನಾಡಲಿ ಎಂದು ಹೇಳಲಿಲ್ಲ. ಅವರು ಆ ಪ್ರದೇಶದಿಂದ ಬಂದಿರತಕ್ಕವರಾದ್ದರಿಂದ, ಅವರು ಬೇರೆ ಬೇರೆ ವಿಚಾರಗಳನ್ನು ಹೇಳುವುದರಿಂದ ಅವರಿಗೆ ಅವಕಾಶ ಕೊಡಬೇಕು. ಇದರಿಂದ ತಮಗೂ ಅನುಕೂಲವಾಗುತ್ತದೆ.

ಅಧ್ಯಕ್ಷರು.—ಅವರೊಬ್ಬರಿಗೆ ಅವಕಾಶ ಕೊಟ್ಟರೆ ಎಲ್ಲರಿಗೂ ಕೊಡಬೇಕಾಗುತ್ತದೆ. ತಾವು ಅವರೊಬ್ಬರು ಮಾತನಾಡಿದರೆ ಸಾಕು ಎಂದು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಹೌದು.

ಅಧ್ಯಕ್ಷರು.—ಸ್ವಲ್ಪ ತಡೆಯಿರಿ, ಸಭಾನಾಯಕರ ಅಭಿಪ್ರಾಯ ಕೇಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಬಂಗಾರಪ್ಪನವರು ಮಾತನಾಡುತ್ತಿರುವಾಗ ಸಭಾನಾಯಕರಿಗೆ ಏಕೆ ತೊಂದರೆ ಕೊಡುತ್ತೀರಿ.

ಅಧ್ಯಕ್ಷರು.—ನಾನಿನ್ನೂ ರೂಲಿಂಗ್ ಕೊಡುವುದಕ್ಕೆ ಹೋಗಿಲ್ಲ. ಈಗ ಮಲ್ಲಾರಿಗೌಡ ಪಾಟೀಲರಿಗೆ ಒಬ್ಬರಿಗೆ ಅವಕಾಶ ಕೊಡಬೇಕೆಂದು ಹೇಳುತ್ತೀರಾ ?

(ಗೊಂದಲ)

ಶ್ರೀ ಟಿ. ವಿ. ಕರೀಗೌಡ —ವಿರೋಧಿ ಸದಸ್ಯರು ಪದೇ ಪದೇ ಎದ್ದು ಗಲಾಟೆ ಮಾಡುತ್ತಿದ್ದಾರೆ. ನಮಗೂ ಆ ರೀತಿ ಮಾಡಲು ಬರುತ್ತದೆ.

ಒಬ್ಬ ಮಾನ್ಯ ಸದಸ್ಯರು.—ವಿರೋಧ ಪಕ್ಷದ ಸದಸ್ಯರು ಎಲ್ಲರೂ ಮಾತನಾಡಿದ್ದಾರೆ. ಮತ್ತೆ ಅವರಿಗೇ ಅವಕಾಶ ಕೊಟ್ಟು......

೨-೦೦ ಪಿ.ಎಂ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ತಾವು ನನ್ನನ್ನು ಕರೆದಿದ್ದೀರಿ. ನಾನು ಎದ್ದಿದ್ದೇನೆ. ಅಷ್ಟರಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ. ಅದು ಅವರ ಅಭ್ಯಾಸದ ಬಲ ಎಂದು ನಾನು ಹೇಳುವುದಿಲ್ಲ. ಈಗ ಮಾನ್ಯ ಮಲ್ಲಾರಿಗೌಡ ಪಾಟೀಲರು ಏನು ಇದ್ದಾರೆ ಅವರು ಈ ಮನೆಗೆ ಹೊಸ ಸದಸ್ಯರೇನೂ ಅಲ್ಲ. ಅವರೂ ಹಳಬರೇ. ಅಲ್ಲದೆ ಅವರು ವಿರೋಧಿ ಪಕ್ಷದ ಮುಖ್ಯ ಸಚೇತಕರು. ಈ ದೃಷ್ಟಿಯಿಂದ ನನಗೆ ಸ್ವಲ್ಪ ವ್ಯಸನವೂ ಆಯಿತು, ದುಃಖವೂ ಆಯಿತು. ಆದರೆ ಅವರು ಉಪಯೋಗಿಸುವ ಭಾಷೆ ಅವರ ಪ್ರತಿಭಟನೆ ರೂಪ ನೋಡಿದರೆ, ಅವರು ಮಾತನಾಡಲಿಕ್ಕೆ ನನ್ನ ಆಕ್ಷೇಪ ಏನೂ ಇಲ್ಲ, ಇದರ ಬಗ್ಗೆ ೨೦ ಜನ ಸಹಿ ಹಾಕಿರುವವರೂ ಸಹ ಮಾತನಾಡಲಿ, ಅದಕ್ಕೆ ನನ್ನ ಆಕ್ಷೇಪ ಇಲ್ಲ. ನಾನು ಕೂತುಕೊಂಡೇ ಕೇಳುತ್ತೇನೆ. ಪುನಃ ಅವರಿಗೆ ನಾನು ಸ್ಪಷ್ಟವಾಗಿ ಕೊಡಲಿಕ್ಕೆ ಬಯಸುತ್ತೇನೆ. ಅವರು ಬಡ್ಜೆಟ್ ಮೇಲೆ ಚರ್ಚೆ ಮಾಡಲಿಕ್ಕೆ ಆಸ್ತೆ ಇರಲಿಲ್ಲ, ಅದು ಅವರ ಇಷ್ಟ. ಹಾಗೆಯೇ ಪ್ರತಿಯೊಬ್ಬರದೂ ಕೂಡ ಅವರವರ ಇಷ್ಟ. ಆದರೆ ಈ ಕಡೆ ಇರುವವರಿಗೆ ಬಡ್ಜೆಟ್ ಮೇಲೆ, ಆರ್ಥಿಕ ಪರಿಸ್ಥಿತಿ ಮೇಲೆ ಚರ್ಚೆ ಮಾಡಲಿಕ್ಕೆ ಬಯಸುತ್ತಾರೆ.

(ಆಡಳಿತ ಪಕ್ಷದವರು ಮೇಜು ಕುಟ್ಟಿದರು)

ಶ್ರೀ ಎಸ್. ಬಂಗಾರಪ್ಪ.—ಇವರ ಬಡ್ಜೆಟ್‌ನ್ನು ಅವರೇ ಮೆಚ್ಚಿಕೊಳ್ಳಬೇಕು. ಮಹಾ ಬಡ್ಜೆಟ್.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿ ದಿನವೂ ಈ ವಿಚಾರವನ್ನೇ ಪ್ರಸ್ತಾಪ ಮಾಡಲಿ, ಪ್ರತಿದಿನವೂ ಯಾವುದಾದರೂ ನಿಲುವಳಿ ಸೂಚನೆ ತಂದು ಪ್ರಸ್ತಾಪ ಮಾಡಲಿ. ಅದರ ಬಗ್ಗೆ ನನ್ನ ಆಕ್ಷೇಪ ಇಲ್ಲ. ಎಲ್ಲಿಯವರೆಗೆ ಮಾನ್ಯ ಅಧ್ಯಕ್ಷರ ಪರವಾನಗಿ ಇರುತ್ತದೋ ಅಲ್ಲಿಯವರೆಗೂ ಮಾತನಾಡಲಿ, ಎಲ್ಲರಿಗೂ ಸ್ವತಂತ್ರ ಇದೆ. ಆ ಸ್ವತಂತ್ರವನ್ನು ಮೊಟಕು ಮಾಡುವುದಕ್ಕೆ ನನಗೆ ಇಷ್ಟವಿಲ್ಲ.

ಶ್ರೀ ಎಂ. ರಾಮಪ್ಪ.—ಮೊಟಕು ಮಾಡುವ ಅಧಿಕಾರ ನಿಮಗೆ ಇಲ್ಲ ಸ್ವಾಮಿ,

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಶ್ರೀ ರಾಮಪ್ಪನವರ ಅಷ್ಟು ಎತ್ತರ, ನಾನು ಇಲ್ಲ, ಅವರದ್ದು ಧ್ವನಿ ದೊಡ್ಡದು. ಅವರ ಜೊತೆಗೆ ನಾನು ಕಾಂಪಿಟಿಷನ್ ಮಾಡುವುದಕ್ಕಾಗುವುದಿಲ್ಲ. ಶ್ರೀ ರಾಮಪ್ಪನವರು ತಿಳಿದುಕೊಳ್ಳಬೇಕು. ನಿಮಗೆ ಇಲ್ಲಿ ಮಾತನಾಡುವುದಕ್ಕೆ ಹಕ್ಕು ಇದೆ, ಹಾಗೆಯೇ ಈ ಕಡೆಯಲ್ಲಿ ಕೂತಿರತಕ್ಕಂಥಾ ಸದಸ್ಯರಿಗೂ ಸಹ ಹಕ್ಕು ಇದೆ. ಎಲ್ಲರಿಗೂ ಹಕ್ಕು ಇದೆ, ಹಕ್ಕು ಇಲ್ಲ ಎಂದು ಹೇಳುವುದಿಲ್ಲ. ಆದರೆ ನಾವು ಬಯಸಿದರೆ ರೂಲ್ಸ್ ಪ್ರಕಾರ ನಡವಳಿಕೆಗಳನ್ನು ನಡೆಸುವ ಹಕ್ಕು ನಮಗೆ ಇದೆ. ನೀವು ಅದನ್ನು ಕಸಿದುಕೊಳ್ಳುವುದಕ್ಕಾಗುವುದಿಲ್ಲ. ನಾನು ಸುಮ್ಮನೆ ಕೂತುಕೊಂಡು ಕೇಳುತ್ತಿದ್ದೇನೆ. ನಾವು ಮರ್ಯಾದೆಯಿಂದಲೇ ನಡೆದುಕೊಳ್ಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು ಏನು ಮಾತನಾಡುತ್ತಾರೆ ಅನ್ನುವುದನ್ನು ಕೇಳೋಣ. ದಯವಿಟ್ಟು ಎಲ್ಲರೂ ಕೂತುಕೊಳ್ಳಿ. ಅವರು ತಮ್ಮ ಭಾಷಣವನ್ನು ಇನ್ನೂ ಮುಗಿಸಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸರಿಯಲ್ಲ. ಇಲ್ಲಿ ಎಲ್ಲರೂ ಕೂಡ ಘನತೆ ಗೌರವ, ಮಾನ ಮರ್ಯಾದೆಗಳಿಂದ ಬಂದಿದ್ದಾರೆ. ಆದುದರಿಂದ, ಅವರು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ..................

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವುದು ಮುಗಿಯಲಿ. ಅವರು ಇನ್ನೂ ಮುಗಿಸಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ —ಹಾಗಾದರೆ ಇಲ್ಲಿಯವರೆಗೆ ಇದ್ದ ಮರ್ಯಾದೆ ಎಲ್ಲಿಗೆ ಹೋಯಿತು?

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾರಾವರೂ ಮಾತನಾಡಲಿ, ಅವರಿಗೆ ಅವಕಾಶ ಕೊಡಲಿ. ನನ್ನ ಆಕ್ಷೇಪ ಇಲ್ಲ. ಆದರೆ ಕೊನೆಗೆ ನಮ್ಮ ಕಾರ್ಯಕ್ರಮದ ಟೈಂಟೇಬಲ್ ಏನು ಇದೆ ಆ ಪ್ರಕಾರ ಸರಿಯಾಗಿ ಇವೆಲ್ಲವೂ ಮುಗಿಯಬೇಕು. ಅದನ್ನು ಯಾವ ಸಂದರ್ಭದಲ್ಲಾದರೂ ಕೂಡ ಮುಂದಕ್ಕೆ ಹಾಕುವುದಕ್ಕೆ ಅವಕಾಶ ಕೊಡುವುದಿಲ್ಲ,

ಅಧ್ಯಕ್ಷರು.—ಶ್ರೀಮಾನ್ ಮಲ್ಲಾರಿಗೌಡ ಪಾಟೀಲರೇ ತಮ್ಮ ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಸದಸ್ಯರಾದ ಮಲ್ಲಾರಿಗೌಡ ಪಾಟೀಲರು ಮೊದಲು ಅಧ್ಯಕ್ಷರ ಮೇಲೆ ಬಳಸಿದ ಪದಗಳನ್ನು ಕಡಿತದಿಂದ ತೆಗೆಸಬೇಕು ಎಂದು ಹೇಳುತ್ತೇನೆ. ಅವರು ಹೇಳಿದ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಘನತೆ ಗೌರವದ ಬಗ್ಗೆ ಮಾತನಾಡಿದರಲ್ಲಾ, ಈವಾಗ ತಮಗೆ ಗೊತ್ತಾಯಿತಲ್ಲಾ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕೂತುಕೊಳ್ಳಿ. ಮಲ್ಲಾರಿಗೌಡ ಪಾಟೀಲರು ೫ ನಿಮಿಷ ಮಾತನಾಡುವುದಕ್ಕೆ ಒಪ್ಪಿಗೆ ಕೊಟ್ಟಿದ್ದೇನೆ. ಅವರು ಮಾತನಾಡಲಿ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಿದಾಗ ಕೆಲವು ವಿಷಯಗಳ ಬಗ್ಗೆ ಉದ್ರೇಕದಿಂದ ಮಾತನಾಡಿರಬಹುದು. ಆದರಿಂದ ಈ ಸದನಕ್ಕೆ ಹಾಗೂ ಸಭಾನಾಯಕರಿಗೆ ಅಪಮಾನವಾಗಿದ್ದರೆ ನಾನು ಕ್ಷಮೆ ಬೇಡುತ್ತೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದು ಬಹಳ ಗಂಭೀರವಾದ ವಿಷಯ. ನಾವೂ ಅವರೂ ಒಂದು ಕಡೆ ಇದ್ದಂಥಾ ಜಾಗದಲ್ಲಿ ಈ ಒಂದು ಘಟನೆ ನಡೆದಿದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥಾ ವಿಚಾರ. ಸಂಪುಟದಲ್ಲಿ ಇರತಕ್ಕಂಥಾ ಈ ಸಚಿವರು ನಮ್ಮ ಜೊತೆಗೂ,ನಿಮ್ಮ ಜೊತೆಗೂ ಯಾವ ರೀತಿಯಾಗಿ ಹೋರಾಟ ಮಾಡಿದ್ದಾರೆ ಅನ್ನುವುದು ನಿಮಗೂ ಗೊತ್ತಿದೆ. ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಗೌರವ ಇದೆ. ಅವರು ಇಲ್ಲಿಗೆ ೩-೪ ಬಾರಿ ಆಯ್ಕೆಯಾಗಿ ಬಂದಿದ್ದಾರೆ ಅವರು ಒಳ್ಳೆಯ ಸ್ಥಾನಮಾನದಲ್ಲಿದ್ದಾರೆ. ಈಗಾಗಲೇ ನಮ್ಮ ನಾಯಕರು ಹೇಳಿದ ಪ್ರಕಾರ ವಿಧಾನಸೌಧದ ಹಿಂದುಗಡೆ ಇರತಕ್ಕಂಥಾ ಶ್ರೀಮಾನ್ ಹೆಚ್. ಹನುಮಂತಯ್ಯನವರ ಸ್ಟ್ಯಾಚೂ ಬಗ್ಗೆ ತಕರಾರು ಎದ್ದಿದೆ. ಧರ್ಮೋ ರಕ್ಷತಿ ರಕ್ಷಕಃ ಎಂದು ಏನು ಇದೆ ಅದನ್ನು ಪಾಲಿಸಬೇಕು. ಈ ಸದನದಲ್ಲಿ ಸಚಿವರೊಬ್ಬರ ಮೇಲೆ ಗಂಭೀರವಾದ ಆರೋಪ ಬಂದಾಗ ಜನತಾ ಸರ್ಕಾರದ ಕಾನೂನಿನ ಗಂಟೆ ಏನು ಇದೆ ಅದು ಎಲ್ಲಿಗೆ ಹೋಗಿದೆ ಎಂದು ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಸದನದ ಸಭಾನಾಯಕರನ್ನು ಕೇಳುತ್ತೇನೆ, ಶ್ರೀಮಾನ್ ಮಲ್ಲಾರಿಗೌಡರು ಏನಾದರೂ ತಪ್ಪು ಮಾಡಿದರೆ ಅದನ್ನು ಕೇಳುವುದಕ್ಕೆ ತಮಗೆ ಅಧಿಕಾರ ಇದೆ ಹಾಗೆಯೇ ಸಮಾಜದಲ್ಲಿರತಕ್ಕಂಥಾ ಬಡವರಿಗೆ ಅಧಿಕಾರ ಇರುವುದಿಲ್ಲವೇ? ನಾನು ಹೇಳುವುದು ಇಷ್ಟೆ. ಅವರ ಮೇಲೆ ಆರೋಪ ಇದೆ. ಅವರ ಮೇಲೆ ಗುರುತರವಾದ ಆಪಾದನೆ ಇರುವುದರಿಂದ ಅವರ ಮೇಲೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಾ? ಈಗಾಗಲೇ ಶ್ರೀ ಎಸ್. ಬಂಗಾರಪ್ಪ, ಶ್ರೀ ವೀರಪ್ಪಮೊಯ್ಲಿ, ಶ್ರೀ ಕೆ. ಹೆಚ್. ಶ್ರೀನಿವಾಸ್ ಅವರು ಮಾತನಾಡಿದ್ದಾರೆ. ಈಗ ಇರತಕ್ಕಂಥಾ ಸದನದ ಕಾರ್ಯಕಲಾಪಗಳನ್ನು ಮುಂದೂಡಿ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈ ವಿಷಯದ ಬಗ್ಗೆ ನಾನು ಹೇಳುವುದು ಇಷ್ಟೆ. ಈವೊತ್ತಿನ

ದಿವಸ ಮಾನ್ಯ ಮಂತ್ರಿಗಳು ಯಾವ ಒಂದು ಆರೋಪಕ್ಕೆ ಒಳಗಾಗಿದ್ದಾರೆ ಆ ಆರೋಪ ಮುಗಿಯುವ ವರೆಗೆ, ಅದು ವಿಮುಕ್ತವಾಗುವವರೆಗೆ ಅವರು ಆ ಸ್ಥಾನದಲ್ಲಿ ಮುಂದುವರೆಯಬಾರದು ಎನ್ನುವ ವಿಷಯ ಹೇಳಿದ್ದೇವೆ. ಇದು ಬಹಳ ಮಹತ್ವವಾದ ವಿಚಾರ. ಆದುದರಿಂದ ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಮೂರು ನಾಲ್ಕು ಸಲ ಆದ ಮೇಲೆ ಅವರಿಗೆ ಅವಕಾಶ ಬಂದಿದೆ. ಆ ಅವಕಾಶವನ್ನು ಬಳಸಿಕೊಂಡು ಸಮಾಜದ ಬಡ ವರ್ಗದವರಿಗೆ ವಿಶೇಷವಾಗಿ ಹಿಂದುಳಿದ ಸಮಾಜದ್ವಬಗ್ಗೆ ಸಮಾಜ ಕಲ್ಯಾಣ ಮಂತ್ರಿಗಳಿಗೆ ಅನುಕಂಪ ಇದ್ದು ಅವರಿಗಾಗಿ ಕೆಲಸ ಮಾಡುವ ಅವಕಾಶ ಇದ್ದಾಗ ಇವರು ಯಾವ ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ? ಇವತ್ತು ಅವರ ಮೇಲೆ ಬಂದಿರುವ ಹಲವಾರು ಆರೋಪಗಳನ್ನು ಅವರು ಎದುರಿಸಬೇಕಾಗಿದೆ. ನಾವು ಇವತ್ತು ಮಾಡುತ್ತಿರುವ ಆರೋಪಗಳನ್ನು ಹೇಳುವುದಕ್ಕೆ ನಮಗೆ ಅವಕಾಶ ಕೊಡಬೇಕು. ಅದು ವಿರೋಧ ಪಕ್ಷಗಳ ಕೆಲಸ ಆ ಕಡೆಯ ಮಾನ್ಯ ಮಂತ್ರಿಯವರಿಗೆ ನಾನು ಹೇಳುತ್ತೇನೆ ಇವತ್ತು ನನ್ನ ಮೇಲೆ ಆರೋಪ ಬಂದರೆ ಶಿರಸಾವಹಿಸಿ ಅವರು ಹೇಳುವುದನ್ನು ನಾನು ಕೇಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು; ಅದಕ್ಕಾಗಿ ನಾನು ಕ್ಷಮೆ ಕೇಳುತ್ತೇನೆ. ಇದಕ್ಕೆ ಮನೋಧೈರ್ಯ ಬೇಕು. ಅದಿಲ್ಲದಿದ್ದರೆ ನಮ್ಮ ಕರ್ತವ್ಯಕ್ಕೆ ಲೋಪ ಮಾಡಿಕೊಳ್ಳುತ್ತೇವೆ. ಆದ್ದರಿಂದ ಈ ರಾಜ್ಯದ ಹಿರಿಮೆ ಏನಿದೆ ಅದನ್ನು ಉಳಿಸಿಕೊಂಡು ಕೆಲಸ ಮಾಡಿಕೊಂಡು ಹೋಗಬೇಕೆಂದು ತಮ್ಮ ಮೂಲಕ ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಸಭಾ ನಾಯಕರು ಹೇಳಲಿ. ಆ ಮೇಲೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನನ್ನ ಅಭಿಪ್ರಾಯದಲ್ಲಿ ಈ ನಿಲುವಳಿ ಸೂಚನೆಗೆ ಯಾವುದೇ ರೀತಿಯ ಆಧಾರವೇ ಆಗಲಿ ಅಥವಾ ಸಮರ್ಥನೆಯಾಗಲೀ ಇಲ್ಲ. ನಾನು ಮೊದಲೇ ಹೇಳಿದಂತೆ ನಿಲುವಳಿ ಸೂಚನೆ ಅತಿ ಜರೂರಾದಂತೆ ಅಂದರೆ ಎ ಮ್ಯಾಟರ್ ಆಫ್ ಪಬ್ಲಿಕ್ ಇಂಪಾರ್ಟೆನ್ಸ್. ಮತ್ತು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಷಯವಾಗಿರಬೇಕು. ಎರಡನೆಯದಾಗಿ ಇತ್ತೀಚೆಗೆಷ್ಟೇ ಘಟಿಸಿದಂಥ ಘಟನೆ ಆಗಿರಬೇಕು. ಇವೆರಡೂ ಆಗಿರದಿದ್ದರೆ ನಿಲುವಳಿ ಸೂಚನೆಯನ್ನು ತಾವು ನಿಷ್ಕರ್ಷೆ ಮಾಡತಕ್ಕಂಥಾದ್ದು, ಒಪ್ಪಿಗೆ ಕೊಡತಕ್ಕಂಥಾದ್ದು ರೂಲ್ಸ್ ಪ್ರಕಾರ ಬರುವುದಿಲ್ಲ.

ಈ ತಿಂಗಳ ೧೧ನೇ ತಾರೀಖು ಶ್ರೀ ರಾಜೇಂದ್ರ ಆಲಪ್ಪ ನಾಯಕವಾಡಿ ಅವರು ರಾಯಭಾಗ ಪೋಲೀಸ್ ಸ್ಟೇಷನ್‌ನಲ್ಲಿ ಒಂದು ಕಂಪ್ಲೇಂಟ್ ಕೊಟ್ಟರು. ಅಂದರೆ ಈ ಘಟನೆಯನ್ನು ಆಧಾರಕ್ಕೆ ತೆಗೆದುಕೊಂಡರೆ ಈ ಘಟನೆ ನಡೆದ ಸುಮಾರು ಒಂದು ತಿಂಗಳಾಗುತ್ತಾ ಬಂದಿದೆ ೧೧ನೇ ತಾರೀಖಿಗೆ ಅವರು ದೂರು ಕೊಟ್ಟರು. ಫಿರ್ಯಾದುಗಾರರು ಹೇಳುವುದು, ೧೦, ೧೨ ದಿವಸಗಳ ಹಿಂದೆ ಶ್ರೀಮತಿ ಅಕ್ಕುತಾಯಿ ಮತ್ತು ಅಣ್ಣನ ಮಗ ಇಬ್ಬರೂ ನಾಪತ್ತೆಯಾಗಿದ್ದಾರೆಂದು ದೂರುಬಂತು. ಮತ್ತು ಅದೇ ದೂರಿನಲ್ಲಿ ವಿ.ಎಲ್. ಪಾಟೀಲರ ಮತ್ತು ಮಗನ ಹೆಸರಿನ ಪ್ರಸ್ತಾಪ ಮಾಡಿದರು. ಅದನ್ನು ಓದಿಬಿಡುತ್ತೇನೆ.

“ನನ್ನ ಅಣ್ಣನ ಹೆಂಡತಿಯಾದ ಅಕ್ಕುತಾಯಿ ಮತ್ತು ಮಾರುತಿ ನಾಯಕವಾಡಿ ಹಾಗೂ ಅಣ್ಣನ ಮಗನಾದ ರಾಜೇಂದ್ರ ಮಾರುತಿ ನಾಯಕವಾಡಿ ಅವರುಗಳನ್ನು ಬೇಸತ್ ಮಾಡಿದ್ದು ಯಾರೋ ಓಡಿಸಿಕೊಂಡು ಹೋಗಿದ್ದಾರೆ. ಇದು ತಿಳಿದ ನಂತರ ೮-೧೦ ದಿವಸಗಳಿಂದ ಹುಡುಕುತ್ತಾ ಇದ್ದೇವೆ. ಈಗ ಸ್ವತಃ ಶ್ರೀ ವಸಂತರಾವ್ ಎಲ್. ಪಾಟೀಲ್. ಪ್ರತಾಪರಾವ್ ಆ ಪಾಟೀಲ್ ವಿವೇಕರಾವ್ ವ ಪಾಟೀಲ್ ಇವರೆಲ್ಲ ಸೇರಿ ಗೂಂಡಾಗಳ ಸಹಾಯದಿಂದ ತಮ್ಮ ಮಾನ ಹೋಗುವುದೆಂದು ತಿಳಿದು ರಿಟ್ ಅರ್ಜಿಗಳನ್ನು ಹಿಂದೆ ತೆಗೆದುಕೊಳ್ಳಬೇಕೆಂದು ಅಂದರೆ ಜಮೀನಿಗೆ ಸಂಬಂದಪಟ್ಟ ಅರ್ಜಿಗಳನ್ನು ಅವರ ಜೀವಕ್ಕೆ ಧಮಕಿ ಹಾಕಿ ಅವರಿಗೇ ಅನುಕೂಲವಾಗುವಂತೆ ಹೇಳಿಕೆಯನ್ನು ಪಡೆದುಕೊಂಡು ರಿಟ್‌ಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ಅರ್ಜಿಗಳನ್ನು ದಾಖಲು ಮಾಡಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ನನಗೆ ಆಸ್ತಿಗಿಂತ ನನ್ನ ಅಣ್ಣನ ಹೆಂಡತಿಯ ಹಾಗೂ ಮಗನಾದ ರಾಜೇಂದ್ರ ಇವರ ಜೀವಕ್ಕೆ ಅಪಾಯ ಇದೆಯೆಂದು ತಿಳಿದುಬಂತು. ಇದರ ಬಗ್ಗೆ ಯೋಗ್ಯ ಚೌಕಸಿ ಮಾಡಿ ಆರೋಪಿಗಳ ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಫಿರ್ಯಾದಿ.

ಒಳ್ಳೆಯದು ಇವರಿಗೆ ತಮ್ಮ ಆಸ್ತಿಗಿಂತ ಅಣ್ಣನ ಹೆಂಡ ಮತ್ತು ಮಗನ ಮೇಲೆ ಹೆಚ್ಚಿನ ಮಮತೆ ಇದೆ. ಇದರಲ್ಲಿ ಕೂಡ ಕಿಡ್ನ್ಯಾಪ್ ಮಾಡಿದ್ದಾರೆಂದು ಹೇಳಿಲ್ಲ. ಹಾಗೆಂದು ಹೇಳಿದ್ದು ಆಮೇಲೆ.

ನನ್ನ ಮೊದಲನೇ ಆಕ್ಷೇಪಣೆ ಏನೆಂದರೆ ಮಾನ್ಯ ಅಧ್ಯಕ್ಷರೇ ಅಲ್ಲಿ ಕುಳಿತಿರತಕ್ಕಂಥ ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಅಷ್ಟೊಂದು ಆಸಕ್ತಿ ಇದ್ದು ಮತ್ತು ಈ ಹೆಣ್ಣು ಮಗಳ ಮತ್ತು ಆ ಹುಡುಗನ ಜೀವಕ್ಕೆ ಧಕ್ಕೆ ಇದೆಯೆಂದು ಇವರ ಮನಸ್ಸು ನೊಂದಿದ್ದರೆ ಇಷ್ಟು ದಿವಸ ಏಕೆ ಈ ವಿಚಾರ ಎತ್ತಲಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಾನು ಮಾನ್ಯ ಖರ್ಗೆಯವರು ಬೇರೆ ತರಹ ಅಂತ ಅಂದು ಕೊಂಡಿದ್ದೆ, ನನಗೆ ಅವರು ನಿರಾಶೆ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕಾಲಿಂಗ್ ಅಟೆನ್ಷನ್ ನೋಟೀಸ್ ಕೊಟ್ಟಿದ್ದು ತಪ್ಪೇ ಹಾಗಾದರೆ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೆಯದಾಗಿ ಅವರು ಯಾರು ಆ ಮೇಲೆ ಬಂದು ಇವರ ಹತ್ತಿರ ಹೇಳಿದರೋ ಅವರಿಗೂ ಇವರಿಗೂ ಸಂಬಂಧ ಮೊದಲಿನಿಂದಲೂ ಇದೆ. ಮಾನ್ಯ ಶಂಕರಾನಂದ್ ಅವರ ಕಾರಿನ ಮೇಲೆ ಕಲ್ಲು ಬಿದ್ದ ಕಾಲವೂ ಇದೆ. ಈ ಫಿರ್ಯಾದು ಬಂದ ಮೇಲೆ ತಮ್ಮ ಜವಾಬ್ದಾರಿಗೆ ತಕ್ಕಂತೆ ಪೋಲೀಸರು ಈ ಮಹಿಳೆಯನ್ನು ಹಾಗೂ ಹುಡುಗನನ್ನು ಶೋಧ ಮಾಡಲು ಪ್ರಾರಂಭ ಮಾಡಿದರು. ಮತ್ತು ನಾಪತ್ತೆಯಾದವರು ತಮ್ಮದೇ ಆದಂಥ ಊರಿನಲ್ಲಿ ೧೯ನೇ ತಾರೀಖಿಗೆ ಇದ್ದ ಸುದ್ದಿ ಗೊತ್ತಾಯಿತು ಅಂದರೆ ಕುಡುಚಿ ಎಂಬ ಅವರ ಸಂಬಂಧಿಕರ ಮನೆಯಲ್ಲಿ ಇದಾದಮೇಲೆ ೨೩ನೇ ತಾರೀಖಿಗೆ ಅಕ್ಕುತಾಯಿ ಮತ್ತು ರಾಜೇಂದ್ರ ಇವರಿಬ್ಬರೂ ಪೋಲೀಸರಿಗೆ ಒಂದು ಹೇಳಿಕೆಯನ್ನು ಬರೆದುಕೊಟ್ಟರು. ಆದರೆ ಪೋಲೀಸರು ಅದನ್ನು ತೆಗೆದುಕೊಳ್ಳಲಿಲ್ಲ. ಬದಲಿಗೆ ಜುಡಿಶಿಯಲ್ ಮ್ಯಾಜಿಸ್ಟ್ರೇಟ್ ಅವರ ಹತ್ತಿರ ತೆಗೆದುಕೊಂಡರು. ಏಕೆಂದರೆ ನಾಳೆ ದಿವಸ ಪೋಲಿಸಿನವರೇ ಹೊಡೆದು ಬಡಿದು ಹೇಳಿಕೆ ಬರೆಸಿಕೊಂಡರು ಎಂದು ಬರಬಾರದಲ್ಲ, ಅದಕ್ಕೆ ಅವರ ಹೇಳಿಕೆ ಈ ರೀತಿ ಇದೆ.

ಇನ್ ದಿ ಕೋರ್ಟ್ ಆಫ್ ದಿ ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟ್ ೧ ಕ್ಲಾಸ್,
ರಾಯಭಾಗ್, ತಾರೀಖು ೨೩–೭೧೮೫ ಆಟ್ ೫.೨೦ ಪಿ. ಎಂ.

ನಿನ್ನ ಹೇಳಿಕೆಯನ್ನು ಸ್ವಯಿಚ್ಛೆಯಿಂದ ಯಾವುದೇ ತರಹದ ಯಾರ ಅಮಿಷಕ್ಕೂ, ಒತ್ತಾಯಕ್ಕೂ ಬೀಳದೆ ನೀಡುತ್ತಿಲ್ಲವೆಂದು ಹೇಳುವಿರಾ ? ನಿಮ್ಮ ಹೇಳಿಕೆ ನಿನ್ನ ವಿರುದ್ಧವಾದಲ್ಲಿ ತೊಂದರೆಯಾಗುತ್ತದೆ.

"......ಅರ್ಜಿಯನ್ನು ಫಿರ್ಯಾದಿ ಕೊಟ್ಟಿದ್ದು ಸುಳ್ಳು, ನಮಗೆ ಯಾರೂ ಹೊಡೆಸಿಕೊಂಡು ಹೋಗಿಲ್ಲ ನಾನು ಕುಡಿಚಿಯಲ್ಲಿ ಮನೆಯಲ್ಲಿ ಇದ್ದೆ." ಆಮೇಲೆ ಮ್ಯಾಜಿಸ್ಟ್ರೇಟರ್ ರಿಮಾರ್ಕ್ಸ್ ಈ ರೀತಿ ಇದೆ.

> "I explained to Akkutai that she is not bound to make a confession and that if she does so any confession, it might be used as an evidence against her and I believe that her confession was voluntarily made. It was taken by me and was read over to the person making it and admitted by her to be correct and it contains a full true account of the statement made by her."

ಮಾನ್ಯ ಅಧ್ಯಕ್ಷರೆ, ಈಗ ಕೇವಲ ಒಂದು ಪೋಲೀಸ್ ಠಾಣೆಯಲ್ಲಿ ಫಿರ್ಯಾದಿ ಹಾಕಿದ್ದು ಮಾತ್ರವಲ್ಲ. ಅದೇ ಜನರು ಹೈಕೋರ್ಟಿಗೆ ಕೂಡ ಹೋಗಿ ಹೇಬಿಯಸ್ ಕಾರ್ಪಸ್ ಪಿಟಿಷನ್ ಹಾಕಿದರು. ಇಲ್ಲಿ ಚರ್ಚೆ ಮಾಡುವುದಕ್ಕೆ ಸ್ವಲ್ಪ ಹೊತ್ತು ಮೊದಲು ಆಗಿದೆ ಶ್ರೀಮತಿ ಅಕ್ಕುತಾಯಿ ಮತ್ತು ರಾಜೇಂದ್ರ ಇವರಿಬ್ಬರು ಹೈಕೋರ್ಟ್ ಮುಂದೆ ಹಾಜರಾಗಿದ್ದರು. ಹೈಕೋರ್ಟಿನಲ್ಲಿ ನೀವು ಎಲ್ಲಿಗೆ ಬೇಕೋ ಅಲ್ಲಿ ಹೋಗಬಹುದು ಎಂದು ಹೇಳಿದರು. ಇಷ್ಟೆಲ್ಲಾ ಆದಮೇಲೆ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಾಗಲಿ ಮತ್ತು ಇದರ ಬಗ್ಗೆ ಮತ್ತಿಷ್ಟು ವಿವರವಾಗಿ ಚರ್ಚೆ ಮಾಡಬೇಕು ಎಂದು ಆಗ್ರಹಪಡಿಸುವುದಾಗಲಿ ಅಗತ್ಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಾನು ಅತ್ಯಂತ

ನೊಂದ ಮನಸ್ಸಿನಿಂದ ಹೇಳುತ್ತೇನೆ. ನನ್ನ ಸಹೋದ್ಯೋಗಿಗಳಾದಂಥ ವಿ. ಎಲ್. ಪಾಟೀಲರು ಯಾರ ಉಸಾಬರಿಗೂ ತಾವಾಗಿ ಎಂದೂ ಹೋಗುವುದಿಲ್ಲ. ಆದರೆ ಒಂದೊಂದು ಸಲ ಅವರ ಮನಸ್ಸಿಗೆ ನೋವಾಗುವಂತೆ ಯಾರಾದರೂ ಮಾಡಿದರೆ ಸ್ವಲ್ಪಮಟ್ಟಿಗೆ ಅವರು ಎಮೋಷನಲ್ ಆಗುತ್ತಾರೆ. ನಾನು ಅವರಿಗೆ ಅನೇಕ ಸಲ ಹೇಳಿದ್ದೇನೆ, ಎಮೋಷನಲ್ ಆಗಬೇಡಿ ಎಂದು ಅದಕ್ಕೋಸ್ಕರವೇ ನೀವು ಹೇಳಿಕೆ ಕೊಡುವುದು ಬೇಡ ನಾನೇ ಹೇಳಿಕೆ ಕೊಡುತ್ತೇನೆ ಎಂದು ಹೇಳಿ ನಾನೇ ಕೊಟ್ಟೆ, ಅವರು ಒಂದು ಹಿಂದುಳಿದ ವರ್ಗದಿಂದ ಬಂದಿದ್ದಾರೆ ಸಮಾಜ ಕಲ್ಯಾಣ ಖಾತೆಯನ್ನು ಅವರಿಗೆ ಕೊಟ್ಟಿದ್ದೇವೆ. ಮಾನ್ಯ ಬಂಗಾರಪ್ಪನವರು, ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನು ಅವರು ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಿದರು. ಯಾವರೀತಿಯಾಗಿ ಉಲ್ಲಂಘನೆ ಮಾಡಿದ್ದಾರೆ ಎನ್ನುವುದರ ಬಗ್ಗೆ ಬೇಕಾದರೆ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಮಾಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಮಾಡಿದ್ದಾರೋ ಇಲ್ಲವೋ, ನನ್ನ ಹತ್ತಿರ ಅನೇಕ ತರಹದ ದೂರುಗಳು ಬರುತ್ತಿವೆ.

(ಗೊಂದಲ)

ಶ್ರೀ ಪಂಪಾಪತಿ.—ಚರ್ಚೆಯಾಗಬೇಕು, ಜನರಿಗೆ ಗೊತ್ತಾಗಬೇಕು, ಸಂತೋಷ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೂ ಈ ಪ್ರಕರಣಕ್ಕೂ ಯಾವ ರೀತಿಯ ಸಂಬಂಧವಿಲ್ಲ ಇದನ್ನು ಏನಾದರೂ ಒಂದು ವಿಚಾರದಲ್ಲಿ ಇಲ್ಲಿ ಪ್ರಸ್ತಾಪ ಮಾಡಿ ಯಾವುದಾದರೂ ಒಂದು ಸಾಧನೆ ಇದ್ದರೆ ಮಾಡಬೇಕು ಎಂದು ಯಾರದಾದರೂ ಇಚ್ಛೆ ಇದ್ದರೆ ಆ ಉದ್ದೇಶ ಸಾಧನೆ ಆಯಿತೋ ಇಲ್ಲವೋ ನನಗೆ ಗೊತ್ತಿಲ್ಲ. ಇದರಿಂದ ಯಾವ ಉಪಯುಕ್ತವಾದ ಕೆಲಸವೂ ಆಗುವುದಿಲ್ಲ.

(ಗೊಂದಲ)

ಶ್ರೀ ವಿ. ಎಲ್. ಪಾಟೀಲ್.—ಲ್ಯಾಂಡ್ ಡಿಫಾರ್ಮ್ಸ್ ಆಕ್ಟನ್ನು ಉಲ್ಲಂಘನೆ ಮಾಡಿದ್ದಾರೆಂದು ಹೇಳಿದ್ದಾರೆ. ಈ ವಿಷಯದಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಬಹುದು, ನಾನು ಓಪನ್ನಾಗಿದ್ದೇನೆ, ೧೯೫೭ ರಿಂದ ರೈತರಿಗೆ ಅನುಕೂಲವಾಗುವಂತೆ ಹೋರಾಡಿದವನು ನಾನು.

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಭಾನಾಯಕರು ಉತ್ತಮವಾದಂಥ ವಿಚಾರವನ್ನು ಎತ್ತಿದ್ದಾರೆ. ಅವರು ಹೇಳಿದಂಥ ಕೊನೆಯ ಮಾತು ಎಲ್ಲರಿಗೂ ಮನ ಮುಟ್ಟುವಂಥಾದ್ದು. ಉತ್ತಮವಾದದ್ದು, ಮೌಲ್ಯಾಧಾರಕ್ಕೆ ಸಂಬಂಧಿಸಿದ್ದು. ಸದನದ ಮುಖಾಂತರ ೪ ಕೋಟಿ ಜನಾಂಗಕ್ಕೆ ಈ ಒಂದು ಭಾವನೆ ಬರಬಾರದು. ವಿರೋಧಪಕ್ಷದವರು ಮತ್ತು ಸರ್ಕಾರದವರು ಮ್ಯೂಚ್ಯುವಲ್ ಬೆನಿಫಿಷಿಯಲ್ ಕಂಪೆನಿ ಈ ಅಸೆಂಬ್ಲಿಗೆ ಆಗಬಾರದು. ಏನೋ ಮಾಡಿದ್ದಾರೆ ಎಂದು ಇವರು ಹೇಳಿದರು, ಅವರೂ ಹೇಳಿದರೂ. ಇವೆರಡೂ ನಿಖಾಲೆ ಆಗಬೇಕಾಗಿದೆ ನಿಕಾಲಿ ಮಾಡದೇ ಹೋದರೆ, ಸದನ ತನ್ನ ಕರ್ತವ್ಯವನ್ನು ಲೋಪಮಾಡಿದಂತಾಗುತ್ತದೆ. ಯಾರೇ ಒಬ್ಬ ಸದಸ್ಯ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರದವರು ಬೇಕಾದರೆ ಜೈಲಿಗೆ ಹಾಕಲಿ. ಗೂಂಡಾ ಆಕ್ಟ್ ಇದೆ ಯಾವುದಕ್ಕೂ ನಾವು ಅಡ್ಡಿ ಬರುವುದಿಲ್ಲ. ಇಲ್ಲದ ಆರೋಪ ಹಚ್ಚಿದರೂ ನಾವು ಅಡ್ಡಿ ಬರುವುದಿಲ್ಲ ನಾವು ಅವರಿಗೆ ಸ್ವಾಗತ ಮಾಡುತ್ತೇವೆ, ಇವತ್ತಿನ ದಿವಸ ಒಂದು ಕಮಿಟಿ ಮಾಡಿ. ಮಾನ್ಯ ಸ್ಪೀಕರ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.— ನಮ್ಮ ಬಗ್ಗೆ ಮಾನ್ಯ ಪಾಟೀಲರು ಒಂದು ಮಾತನ್ನು ಹೇಳಿದರು

ಅಧ್ಯಕ್ಷರು.—ಉತ್ತರ ಕೊಡುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಪಂಪಾಪತಿಯವರಿಗೆ, ಶಾಣಪ್ಪನವರಿಗೆ, ಭೂಪತಿಯವರಿಗೆ ಒಂದು ಮಾತನ್ನು ಹೇಳಿದರು ಅವರ ವಿಷಯದಲ್ಲಿ ಎಲ್ಲವನ್ನೂ ಪರಿಶೀಲನೆ ಮಾಡಬಹುದು. ನಾವು ಒಪನ್ನಾಗಿದ್ದೇನೆ, ಎಂದು ಹೇಳಿದರು. ಆ ಜವಾಬ್ದಾರಿ ಬಹಳ ದೊಡ್ಡ ಜವಾಬ್ದಾರಿ ಅದನ್ನು ಹೊತ್ತುಕೊಳ್ಳುವುದು ಬೇಡ. ಆದರೆ ಮಾನ್ಯ ಸಭಾನಾಯಕರಾದ ಶ್ರೀವರಾಸ್ ರಾಮಕೃಷ್ಣಹೆಗಡೆಯವರು ಹೇಳಿದ್ದನ್ನು ಒಪ್ಪಿಕೊಂಡಿದ್ದೇವೆ. ಯಾರ್ಯಾರದು ಎಲ್ಲೆಲ್ಲಿದೆ, ಈ ಕಡೆ, ಆ ಕಡೆಯವರ ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿದರು ಎನ್ನುವುದು ನನ್ನ ಅಭಿಪ್ರಾಯ. ಎಲ್ಲೆಲ್ಲಿ ಏನೇನಿದೆ ಎಂದು ಹೊರಗಡೆ ಬಂದುಬಿಟ್ಟರೆ ಆಗ ಗೊತ್ತಾಗುತ್ತದೆ, ಚೆನ್ನಾಗಿರುತ್ತದೆ, ವಿವಾದ ಸರಿಯಾಗುತ್ತದೆ. ಯಾರ್ಯಾರು ಮೌಲ್ಯಾಧಾರಿತ ಮಾಡಿದ್ದಾರೆ. ಇಲ್ಲ ಎನ್ನುವುದು ಗೊತ್ತಾಗುತ್ತದೆ. ಆದ್ದರಿಂದ ಚರ್ಚೆಗೆ ತಾವು ಅವಕಾಶ ಮಾಡಿಕೊಡುವುದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು.—ಈಗ ಸಾಕಷ್ಟು ಟೈಂ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆಗಲೇ ತಾವು ಮಧ್ಯೆ ಪ್ರವೇಶ ಮಾಡಬಾರದು ಎಂದು ಹೇಳಿದಿರಿ. ಅನೇಕ ಮಾನ್ಯ ಸದಸ್ಯರು ಮಾತನಾಡಿದರು. ನಾನು ಮಾತನಾಡತಕ್ಕ ಅವಶ್ಯಕತೆ ಇರಲಿಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದರು. ಈ ಕೇಸಿನ ಬಗ್ಗೆ ಬಹಳ ಅನುಕಂಪ ಇದ್ದಿದ್ದರೆ ಇದಕ್ಕಿಂತ ಮುಂಚೆ ಎತ್ತಬಹುದಿತ್ತಲ್ಲ. ಎನ್ನತಕ್ಕ ಮಾತನ್ನು ಹೇಳಿದರು. ಈ ಘಟನೆ ಆಗಿದ್ದು ೬–೭–೧೯೮೫......

ಅಧ್ಯಕ್ಷರು.—ಆರ್ಗ್ಯು ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸುಮ್ಮನೆ ಕಲಿತರೂ ಕೂಡ ಹೇಳುತ್ತಾರೆ.

ಅಧ್ಯಕ್ಷರು.—ಅನುಮತಿ ಕೇಳುವುದಕ್ಕೆ ಇಷ್ಟು ಹೊತ್ತು ಚರ್ಚೆಯಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಿನಾಂಕ ೬–೭–೮೫ಕ್ಕೆ ಇದು ಆಗಿದ್ದು. ಅದು ಆದ ಮೇಲೆ ಪೋಲೀಸರಿಗೆ ಕಂಪ್ಲೈಂಟ್ ಕೊಟ್ಟಿದ್ದು ೧೦–೭–೮೫ ಕ್ಕೆ, ಅದು ಆದಮೇಲೆ ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದು.

ಅಧ್ಯಕ್ಷರು.—ಸಾಕಷ್ಟು ಸದಸ್ಯರು ಹೇಳಿದ್ದಾರೆ. ಟೈಂ ಲಿಮಿಟ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೨೬ನೇ ತಾರೀಖು ನಾವು ನಿಮಗೆ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದು. ಆದರೂ ಕೂಡ ಅನುಕಂಪ ಇಲ್ಲ ಅಂದರೆ ಹೇಗೆ ? ತಮಗೆ ಗೊತ್ತಿದ್ದಂತೆ ನಾವು ಮೂರು ಸಲ ಇನ್‌ಸಿಸ್ಟ್ ಮಾಡಿದ್ದೇವೆ.

ಅಧ್ಯಕ್ಷರು.—ನಾನು ಹಾಕಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಿಂದೆ ನಡೆದಿದೆ, ತಮ್ಮ ಗಮನಕ್ಕೆ ಬಂದಿದೆ. ನಾವು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೇವೆ. ತಾವು ಅದಕ್ಕೆ ಸಮಯ ಕೊಟ್ಟಿಲ್ಲ. ಅದಕ್ಕೋಸ್ಕರ ಅಡ್ಜರ್ನ್‌ಮೆಂಟ್ ಮೋಷನ್ ಎತ್ತಿದ್ದಾರೆ. ಅದಕ್ಕೆ ನಾವು ಸಿಗ್ನೇಚರ್ ಮಾಡಲಿಲ್ಲ ಎಂದು ನಾವ್ಯಾರೂ ಮಾತನಾಡಲಿಲ್ಲ. ಅದಕ್ಕೆ ಈ ವಿಷಯವನ್ನು ಆಗ ಎತ್ತಬೇಕಾಗಿತ್ತು ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ತಾವು ಇದಕ್ಕೆ ಆಗ ಅವಕಾಶಮಾಡಿಕೊಟ್ಟಿಲ್ಲ. ಅವರೂ ಕೂಡ ಹೇಳಿದ್ದಾರೆ, ಚರ್ಚೆಯಾಗಲಿ, ಎಲ್ಲಾ ವಿಷಯಗಳು ಒಂದೇ ಸಲ ಹೊರಗಡೆಬರಲಿ.

ಶ್ರೀ ಆರ್. ವೆಂಕಟರಾಮಯ್ಯ.—ರಾಜಕೀಯ ಮೌಲ್ಯಗಳ ಬಗ್ಗೆ ನಾವು ಮಾತನಾಡುವಾಗ ಮಾನ್ಯ ಸಭಾನಾಯಕರು ಹೇಳುವ ಬದಲು ಮಾನ್ಯ ವಿ. ಎಲ್. ಪಾಟೀಲರು ಒಳ್ಳೆಯ ಕತೆಯೋ, ಕೆಟ್ಟ ಕತೆಯೋ ಹೇಳಿದ್ದರೆ ಒಳ್ಳೆಯದಾಗಿತ್ತು. ಈಗ ಅವರ ಕರ್ತವ್ಯ ಲೋಪ ಬರುತ್ತದೆ. ಅವರು ಏನೋ ಮಾಡಿದ್ದಾರೆ ಎಂದು, ಅಡ್ವರ್ಸ್ ಇನ್‌ಫರೆನ್ಸ್ ಮಾಡಬೇಕಾಗುತ್ತದೆ. ಅವರ ಕತೆ ಏನಿದೆ ಅದನ್ನು ಅವರೇ ಹೇಳಬಹುದಾಗಿತ್ತು. ಈಗ ಮಾನ್ಯ ಸಭಾನಾಯಕರು ಅವರನ್ನು ಪ್ರೊಟೆಕ್ಟ್ ಮಾಡಿದಹಾಗೆ ಆಯಿತು. ಅವರದು ಕತೆ ಏನೇನಿದೆ ಅದನ್ನು ಹೇಳಿಬಿಡಲಿ. ಕಾಂಟ್ರವರ್ಸಿ ರೈಸ್

ಮಾಡುವುದು ಬೇಡ. ಅವರನ್ನು ನೋಡಿದರೆ ಬ್ಲಡ್ ಪ್ರೆಷರ್ ಪೇಷಂಟ್ ಇದ್ದಹಾಗೆ ಇದ್ದಾರೆ. ನಿಜ ಏನಿದೆಯೋ ಅದನ್ನು ಹೇಳಲಿ.

೨-೩೦ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ, ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೀರಾ ಎನ್ನುವ ನಂಬಿಕೆಯಿಂದ ವಿವರಗಳನ್ನು ಸಂಪೂರ್ಣವಾಗಿ ಕೊಡಲಿಕ್ಕೆ ಹೋಗಿಲ್ಲ. ಪೋಲೀಸ್ ಸ್ಟೇಷನ್‌ನಲ್ಲಿ ಯಾವಾಗ ಕಂಪ್ಲೇಂಟ್ ಕೊಟ್ಟರು, ಅನಂತರ ಏನಾಯಿತು ಆ ವಿವರಕ್ಕೆ ಹೋದರೂ ಸಂಪೂರ್ಣವಾಗಿ ಹೋಗಿಲ್ಲ. ಚರ್ಚೆಗೆ ಅವಕಾಶ ಕೊಟ್ಟಮೇಲೆ ವಿವರ ಹೇಳುತ್ತೇನೆ. ಈಗ ಅವರು ಸಹ ಸಂಪೂರ್ಣ ವಿವರ ಇಟ್ಟಿಲ್ಲ. ಕಿಡ್‌ನ್ಯಾಪ್ ಪದ ಪ್ರಯೋಗ ಮಾಡಲಿಲ್ಲ ಎಂದು ಹೇಳಿದರು. ಬೆಳಗಾಂ ಭಾಷೆಯಲ್ಲಿ ಬೇಫತ್ ಅಂತ ಏನೋ ಹೇಳುತ್ತಾರಂತೆ. ಆ ಪದ ಅವರ ಕಂಪ್ಲೇಂಟ್‌ನಲ್ಲಿದೆ ಎಂದು ಗೊತ್ತಾಗುತ್ತದೆ. ಓಡಿಸಿಕೊಂಡು ಹೋದರು ಅಂದರೆ ಕಿಡ್‌ನ್ಯಾಪ್ ಎಂದೇ ಅರ್ಥ. ಕಿಡ್‌ನ್ಯಾಪ್ ಎನ್ನುವ ಅರ್ಥದಲ್ಲಿ ಕಂಪ್ಲೇಂಟ್ ಕೊಟ್ಟಿಲ್ಲ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಒಂದೊಂದು ಕಡೆ ಒಂದೊಂದು ಭಾಷೆ ಒಂದೊಂದು ಅರ್ಥ ಕೊಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರು ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಅದರ ಬಗ್ಗೆ ಸಂಪೂರ್ಣ ವಿವರಕ್ಕೆ ಬರುತ್ತೇನೆ. ನನ್ನ ಹತ್ತಿರ ಫೈಲ್‌ನಲ್ಲಿ ವಿವರಗಳು ಇದೆ. ಮೊದಲನೇ ಅಡ್ಜರ್ನ್‌ಮೆಂಟ್ ಮೋಷನ್‌ಗೆ ನೋಟೀಸ್ ಏತಕ್ಕೆ ಕೊಟ್ಟಿಲ್ಲ ಮಾನ್ಯ ಶಂಕರಾನಂದ್‌ರವರ ಕಾರಿಗೆ ಕಲ್ಲು ಬಿದ್ದಿದ್ದಕ್ಕೂ ಇದಕ್ಕೂ ಸಂಬಂಧ ಇದೆ ಎಂದು ಹೇಳಿದರು. ಅದಕ್ಕೂ ಇದಕ್ಕೂ ಯಾವ ಸಂಬಂಧ ಇದೆಯೋ ನಮಗೆ ಅದು ಕಾಣಿಸುತ್ತಿಲ್ಲ. ಹಾಗೇನಾದರೂ ಸಂಬಂಧವಿದ್ದರೆ, ಸಂಬಂಧ ಇಟ್ಟುಕೊಂಡು ಮಾತನಾಡಲಿಕ್ಕೆ ಬರುತ್ತಿತ್ತು. ನಾವು ಪ್ರಸ್ತಾಪ ಮಾಡಲಿಕ್ಕೆ ಹೋಗಲಿಲ್ಲ. ಹೈಕೋರ್ಟಿನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಬಿದ್ದ ಸಂದರ್ಭದಲ್ಲಿ ಯಾವಾಗ ಗೊತ್ತಾಗುತ್ತದೆ, ಪೇಪರ್‌ನಲ್ಲಿ ಬಂದಾಗ ಗೊತ್ತಾಗುತ್ತದೆ. ಆ ಜನಗಳು ಇಲ್ಲಿ ಬಂದಿದ್ದಾರೆ, ಅನೇಕ ಜನರು ಈ ವಿಚಾರದ ಬಗ್ಗೆ ಬಂದಿದ್ದು ಹೇಳಿದೆ. ಮಾನ್ಯ ಶಂಕರಾನಂದರು ಅವರ ಕಾರಿಗೆ ಕಲ್ಲು ಬಿದ್ದಾಗ ಏತಕ್ಕೆ ಹೇಳಲಿಲ್ಲ ಅಂದರೆ ಸಂಭಂಧ ಇಲ್ಲದೇ ಇರತಕ್ಕ ವಿಚಾರವನ್ನು ತೆಗೆದುಕೊಂಡು ಅದಕ್ಕೆ ಬಾಲ ನೆಂಟಸ್ತಿಕೆ ಕೊಡತಕ್ಕ ಮಾತನಾಡಿದ್ದಾರೆ. ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತೆಗೆದು ಕೊಂಡು ಬರತಕ್ಕ ವಿಚಾರ ಮೊದಲೇ ಗೊತ್ತಿತ್ತು ಅಂದರೆ ಅವರು ಸರ್ವಾಂತರ್ಯಾಮಿಯಾಗಿರಬಹುದು. ನಮಗೆ ವಿಚಾರ ಯಾವಾಗ ಗೊತ್ತಾಯಿತು, ಆ ವಿಚಾರ ಗೊತ್ತಾದ ತಕ್ಷಣವೇ, ಮಾನ್ಯ ಸದಸ್ಯರು ಗಮನ ಸಳೆಯುವ ಸೂಚನೆ ಕೊಟ್ಟಿದ್ದಾರೆ, ನಾವು ನಿಲುವಳಿ ಸೂಚನೆ ಕೊಟ್ಟಿದ್ದೇವೆ, ಅದಕ್ಕೆ ಸಂಬಂಧ ಇಲ್ಲ ಎಂದು ಹೇಳುತ್ತಾರೆ. ಕಳೆದ ತಿಂಗಳು ೧೯ನೇ ತಾರೀಖು ಅವರು ಕುಡುಚಿ ವಿಚಾರದಲ್ಲಿ ಊರಿನಲ್ಲಿದ್ದು ಸ್ಟೇಟ್‌ಮೆಂಟ್ ತೆಗೆದುಕೊಂಡಿದ್ದಾರೆ ಎನ್ನತಕ್ಕದ್ದು. Magistrate is not competent to use that word or record that word such as "confession" ಅವರು ಕೂಡ ಲಾ ಗ್ರಾಜ್ಯುಯೇಟ್ ಎಂದು ಕೇಳಿದ್ದೇನೆ. ಮುಖ್ಯಮಂತ್ರಿಗಳು ಎಷ್ಟು ಪ್ರಾಕ್ಟೀಸ್ ಮಾಡಿದ್ದಾರೋ ಗೊತ್ತಿಲ್ಲ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಮ್ಯಾಜಿಸ್ಟ್ರೇಟ್ ಬರೆದಿದ್ದು ಓದಿದೆ.

ಶ್ರೀ ಎಸ್. ಬಂಗಾರಪ್ಪ.—ಕೇಸ್ ಹಾಕಿ ಅಪರಾಧಿಯಿಂದ ಹೇಳಿಕೆ ತೆಗೆದುಕೊಂಡಮೇಲೆ ಕನ್‌ಫೆಷನ್ ಎನ್ನುವುದು ಬರುತ್ತದೆಯೋ ? ಕಂಪ್ಲೇಂಟ್ ಕೊಟ್ಟವರು ಯಾರಾದರೂ ಕನ್‌ಫೆಷನ್ ಮಾಡುತ್ತಾರೆಯೋ ? ಇದು ಯಾವುದಕ್ಕೂ ಸಂಬಂಧಪಡದ ವಿಚಾರ. ಅಫಿಡವಿಟ್ ಮಾಡಬಹುದು.

ಅಧ್ಯಕ್ಷರು.—ಮುಂದೆ ವಿಷಯ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿರತಕ್ಕ ವಿಚಾರಗಳು ರೆಕಾರ್ಡ್‌ಗೆ ಹೋದಮೇಲೆ ಹಾಗೆ ಬಿಡಲಿಕ್ಕೆ ಆಗುತ್ತದೆಯೋ, ಕಂಪ್ಲೇಂಟ್ ಕೊಟ್ಟವರೇನೇ ಕನ್‌ಫೆಷನ್ ಮಾಡಲಿಕ್ಕೆ ಆಗುತ್ತದೆಯೋ ?

ಅಧ್ಯಕ್ಷರು.—ತಾವು ಕೋರ್ಟಿನಲ್ಲಿ ಆರ್ಗ್ಯೂ ಮಾಡಿದಂತೆ ಮಾಡಲಿಕ್ಕೆ ಹೋದರೆ ಹೇಗೆ.

ಶ್ರೀ ಎಸ್. ಬಂಗಾರಪ್ಪ.—ಲ್ಯಾಂಡ್ ರಿಫಾರಮ್ಸ್ ಆಕ್ಟ್ ಪ್ರಕಾರ ಬಡವರಿಗೆ ಅನ್ಯಾಯ ಮಾಡಿದ್ದಾರೆ ಆ ವಿಚಾರ ಇದೆ, ಅವರು ಕಡತ ಇದೆ ಎಂದು ಹೇಳಿದ್ದಾರೆ. ಯಾರು ಯಾರದು ಇದೆ ಅಷ್ಟು ವಿಚಾರ ಆಗಬೇಕು. ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಒಳಗೆ ಹಾಕಿಕೊಂಡಿರುವ ಬಗ್ಗೆ ಚರ್ಚೆಯಾಗಬೇಕು. ಜೊತೆಗೆ ಈ ನಿಲುವಳಿ ಸೂಚನೆ ಬಗ್ಗೆ ನಾವು ವಿವರಣೆ ಕೊಟ್ಟಿಲ್ಲ ಮತ್ತೊಂದು ವಿಚಾರ ಈಗತಾನೇ ಬಂದಿದೆ. ಅದೇ ಕೇಸ್ ಎರಡೂವರೆ ಗಂಟೆಗೆ ಹಿಯರಿಂಗ್‌ಗೆ ಬರುತ್ತಿದೆ ಎನ್ನುವುದು ತಿಳಿದುಬಂದಿದೆ. ಆದ್ದರಿಂದ, ಮಾನ್ಯ ಅಧ್ಯಕ್ಷರು ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು. ತಾವು ಅವಕಾಶ ಮಾಡಿಕೊಟ್ಟರೆ ಹಲವಾರು ವಿಚಾರಗಳನ್ನು ತಮ್ಮ ಗಮನಕ್ಕೆ ತರುತ್ತೇವೆ. ಅದರ ಬಗ್ಗೆ ಸರ್ಕಾರದವರು ಸಹ ಹೇಳಿಕೆಯನ್ನು ಕೊಡಲಿ, ಅದರ ಬಗ್ಗೆ ತಾವು ತಮ್ಮ ರೂಲಿಂಗ್ ಕೊಡಬೇಕು. ನಾವು ಇನ್ನೂ ವಿವರಗಳನ್ನು ಹಾಗೆಯೇ ಇಟ್ಟುಕೊಂಡಿದ್ದೇವೆ. ತಾವು ಅವಕಾಶ ಮಾಡಿಕೊಡದೇ ಇದ್ದರೆ ಇಲ್ಲಿ ವಾಸ್ತವಾಂಶವನ್ನು ಬೆಳಕಿಗೆ ತರಲಿಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಇದ್ದರೆ, ಎನ್ನುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಅವಕಾಶ ಕೊಡದೇ ಇದ್ದರೆ ವಾಸ್ತವಾಂಶ ಬೆಳಕಿಗೆ ತರಲಿಕ್ಕೆ ಆಗುವುದಿಲ್ಲ ಅದು ಸರಿ ಇದೆ. ಇದ್ದರೆ. ಎನ್ನುವ ಪದ ಬೇಡ ಅಂದರೆಹೇಗೆ ?

ಅಧ್ಯಕ್ಷರು.—ಜಡ್ಜ್ ಎದುರಿಗೆ ಯಾರೂ ನನ್ನಂತೆ ತೀರ್ಮಾನ ಕೊಡದಿದ್ದರೆ ಎಂದು ಹೇಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಪೂರ್ತಿ ಚರ್ಚೆಗೆ ಅವಕಾಶ ಮಾಡಿಕೊಡದೇ ಇದ್ದರೆ ಬೆಳಕಿಗೆ ತರಲಿಕ್ಕೆ ಆಗುವುದಿಲ್ಲ ಎಂದು ಹೇಳಿದ್ದೇನೆ. ಇದ್ದರೆ ಎನ್ನುವ ಪದ ಉಪಯೋಗ ಮಾಡಿರುವುದು ತಪ್ಪೇನು ಅಲ್ಲ.

ಅಧ್ಯಕ್ಷರು.—ನಾನು ಮೂರು ನಿಲುವಳಿ ಸೂಚನೆಯ ನೋಟೀಸ್ ನೋಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಪಾಯಿಂಟ್ ಆಫ್ ಆರ್ಡರ್ ಏನೂ ಇಲ್ಲ. ಚರ್ಚೆ ಮುಗಿದಿದೆ ಮಾನ್ಯ ಬಸವಲಿಂಗಪ್ಪನವರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅಧ್ಯಕ್ಷರೆ. ನಡವಳಿಕೆ ಏನು ನಡೆದಿದೆ ಎಂಬುದನ್ನು ನಾನು ಕೇಳಿದ್ದೇನೆ. ಆ ಕಡೆಯ ಸದಸ್ಯರು, ಈ ಕಡೆಯ ಸದಸ್ಯರು ಹೇಳಿದ್ದನ್ನು ಕೇಳಿದ್ದೇನೆ. ಶ್ರೀಮಾನ್ ಹೆಗಡೆಯವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ತಾವು ತೀರ್ಪು ಕೊಡಲಿಕ್ಕೆ ಹೋಗುತ್ತಿದ್ದೀರಿ. ಇಷ್ಟೆಲ್ಲಾ ಚರ್ಚೆ ವಿ. ಎಲ್. ಪಾಟೀಲರ ವಿರುದ್ಧ ನಡೆಯಿತು. ಈ ಚರ್ಚೆ ಹೆಗಡೆಯವರ ವಿರುದ್ಧ ನಡೆಯಲಿಲ್ಲ. ಈಗ ತಾವು ನ್ಯಾಯವಾದ ತೀರ್ಪು ಕೊಡಿ, ಅದನ್ನು ನಾವು ಕೇಳುತ್ತೇವೆ. ಅದರಂತೆ ನಡೆದುಕೊಳ್ಳುತ್ತೇವೆ, ಮಾನ್ಯ ವಿ. ಎಲ್. ಪಾಟೀಲ್‌ರವರಿಗೆ ಉತ್ತರ ಹೇಳಲಿಕ್ಕೆ ಅವಕಾಶ ಕೊಡದೇ ತೀರ್ಪು ಕೊಟ್ಟರೆ ಅದು ಸರಿಯಲ್ಲ ಎಂದು ನನ್ನ ಭಾವನೆ. ಆದ್ದರಿಂದ, ದಯಮಾಡಿ ಅವರಿಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಮೂರು ನಿಲುವಳಿ ಸೂಚನೆ ನೋಟೀಸ್ ನೋಡಿದ್ದೇನೆ. ಮತ್ತು ಓದಿದ್ದೇನೆ. ಆ ವಿಚಾರದಲ್ಲಿ ಅನೇಕ ವಿಷಯಗಳನ್ನು ನನ್ನ ಎದುರಿನಲ್ಲಿ ಹೇಳಿದ್ದೀರಿ. ಸಭಾನಾಯಕರು ಈ ಬಗ್ಗೆ ವಿವರವಾದ ವಿವರಣೆಯನ್ನು ಕೊಟ್ಟಿದ್ದಾರೆ. ಅನೇಕ ವಿಷಯಗಳು ಇರುವುದರಿಂದ, ಮತ್ತೆ ಮೂರು ನಿಲುವಳಿ ಸೂಚನೆ ನೋಟೀಸ್ ಇರುವುದರಿಂದ, ರೂಲ್ ೬೮ ಮತ್ತು ರೂಲ್ ೧೫೮ರ ಪ್ರಕಾರ ಎಲ್ಲಾ ವಿಷಯಗಳ ಬಗ್ಗೆ ಬೇರೆ ಬೇರೆ ನೋಟೀಸ್ ಕೊಟ್ಟರೆ ಅವಕಾಶ ಮಾಡಿಕೊಡುತ್ತೇನೆ. ನಿಲುವಳಿ ಸೂಚನೆಗೆ ನಾನು ಅಸಮ್ಮತಿ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ತೀರ್ಪನ್ನು ತಾವು ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಅದು ಇವತ್ತೆ ಚರ್ಚೆಯಾಗಬೇಕಾದ ಬಹಳ ಅವಶ್ಯಕತೆ ಇದೆ.

ಅಧ್ಯಕ್ಷರು.—ನಾನು ರೂಲಿಂಗ್ ಕೊಟ್ಟಿದ್ದೇನೆ. ರೂಲ್ ೫೮ ಮತ್ತು ೧೫೮ರ ಪ್ರಕಾರ ಕಾಲಿಂಗ್ ಅಟೆನ್‌ಷನ್ ಬೇರೆ ವಿಷಯಗಳ ಮೇಲೆ ನೋಟೀಸ್ ಕೊಡಿ. ಸಭಾನಾಯಕರು ಕೂಡ ಹೇಳಿದ್ದಾರೆ, ನೋಡಿ ಚರ್ಚೆಗೆ ಅವಕಾಶ ಮಾಡಿಕೊಡೋಣ.

SRI K. H. PATIL.—Sir, I would like to raise a Privilege Motion. It is your discretion Sir that I may be allowed at any time; otherwise, normally, I must be allowed by giving a *Notice* one hour earlier to the Session. But, unfortunately or fortunately, it has happened that during the course of the discussion, the men sitting here was attacked by Mr. V. L. Patil, for the reasions best known to him. He might have thought that if K. H. Patil stands up, his all the black deals would come to light. He wanted to threaten. He said, 'K, H. Patil came and tried to purchase.' If he is a purchasable commodity, I do not know. But, I had some regards for him. He himself has volunateered that he himself is a purchasable commodity. If you are removing everything that has been uttered by Mr. V. L, Patil, I will not raise it, otherwise, caitainly, I am not here only to hear and go away. The prestige of the Members should be safeguarded. I was sitting here, as you know. Mr. Speaker Sir, I was only audible to the discussions here Eventhough, I had a right to speak being a signatory to the Notice, I did not speak since I was satisfied that my colleagues were properly representing. I did not wish to take the time of the House, But, Mr. V. L. Patil wanted to attack me. Perhaps, he thought that I should not raise that. I am raising a privilege motion, I have already sent a Notice of Privilege Motion to you.

MR. SPEAKER.—I will examine.

SRI V. L. PATIL.—You please bear with me Sir. Did not I praise Sir the Leader of the House when he said that he would make an enquiry of both the sides? Whenever good things are done, we are here to wel-come. Sir, the relevant rule speaks thus :

> "Provided the Speaker gives permission and provided further that the Speaher may, if he is satisfied about the urgency of the matter, allow a question of Privilege to be raised, at any time, during the course of the sitting, after the disposal of the questions."

Sir, I have already given Notice to you.

MR. SPEAKER.—I will examine it.

SRI K. H, PATIL.—Sir, that ordinary Notice is to be given to the Secretary, one hour earlier to the Session's commencement. If you are removing everything that has been uttered by Mr, V, L. Patil, I do not want to press. I request you kindly to

expunge the statements from the procedings made by Mr. V. L. Patil. If you do so, I will not raise a Privilege Motion. Let the Hon. Leader of the House say, was it necessary to make much statements by Mr, V. L. Patil. I did not know till now that Mr, V. L. Patil was a purchasable commodity. Sir, you have got the extraordinary power. You please allow me,

SRI RAMAKRISHNA HEGDE.—Sir, the extraordinary power cannot be ordinarily used,

ಶ್ರೀ ಕೆ. ಎಚ್. ಪಾಟೀಲ್.—ಶ್ರೀಮಾನ್ ವಿ. ಎಲ್. ಪಾಟೀಲ್‌ರವರು, ಕೆ. ಎಚ್. ಪಾಟೀಲ್ ಅವರು ಹೇಗೆ ಬಂದರು ಎಂದು ಹೇಳುವವರು ಅವರ ಮನಸ್ಸಿನೊಳಗೆ ಏನು ಇದೆಯೋ ನನಗೆ ಗೊತ್ತಿಲ್ಲ, ಪರ್ಚೇಸಬಲ್ ಕಮೊಡಿಟಿ ತರಹ ಏಕೆ ಈ ರೀತಿ ಮಾಡುತ್ತೀರಿ ? ಏತಕ್ಕೆ ಈ ಬಗ್ಗೆ ಪ್ರಿವಿಲೇಜ್ ಆಲೋ ಮಾಡಬಾರದು ? ಇಲ್ಲದಿದ್ದರೆ ಇವತ್ತು ಅನಾವಶ್ಯಕವಾಗಿ ನಮಗೆ ಸಂಬಂಧವಿಲ್ಲದ ವಿಷಯವನ್ನು ಇಲ್ಲಿ ತಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ರೆಕಾರ್ಡ್ ತರಿಸಿ ಅದನ್ನು ಎಕ್ಸಾಮಿನ್ ಮಾಡುತ್ತೇನೆ.

ಶ್ರೀ ಬಿ. ಎನ್. ಯಡಿಯೂರಪ್ಪ.—ಒಂದು ಕೋಟಿ ರೂಪಾಯಿ ಏನಾಗಿದೆ ? ಅದು ಯಾರ ಹತ್ತಿರ ಇವತ್ತು ಉಳಿದಿದೆ ಎನ್ನುವುದು ತೀರ್ಮಾನವಾಗಬೇಕು. ಅದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಕೆ. ಎಚ್. ಪಾಟೀಲ್.—ಒಂದು ಕೋಟಿ ಇರಲಿ ಎರಡು ಕೋಟಿ ಇರಲಿ, ಕೋಟಿ ತೆಗೆದುಕೊಳ್ಳುವವರನ್ನು ಹೆಗಡೆಯವರು ತಮ್ಮ ಮಂತ್ರಿಮಂಡಲದಲ್ಲಿ ಇಟ್ಟುಕೊಂಡರೆ, ಮೌಲ್ಯಾಧಾರಿತ ಆಡಳಿತ ಖರೀದಿ ಮಾಡುವುದಕ್ಕಾಗುತ್ತದೆಯೋ ?

ಸಂತಾಪ ಸೂಚಕ ನಿರ್ಣಯ

ಲೋಕಸಭಾ ಸದಸ್ಯರಾದ ಲಲಿತ್ ಮೊಕನ್ ಮತ್ತು ಅವರ ಪತ್ನಿಯನ್ನು ಕೊಲೆ ಮಾಡಿದ ಬಗ್ಗೆ

ಶ್ರೀ ಎಸ್. ಬಂಗಾರಪ್ಪ (ಮಾನ್ಯ ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೆ, ನಾನ ತಮ್ಮ ಅಪ್ಪಣೆ ಪಡೆದು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮೊನ್ನೆ ದೆಹಲಿಯಲ್ಲಿ ಲೋಕಸಭಾ ಸದಸ್ಯರಾದ ಲಲಿತ್ ಮಾಕನ್ ಮತ್ತು ಅವರ ಹೆಂಡತಿ ಹಾಗೂ ಮತ್ತೊಬ್ಬರನ್ನು ಯಾರೋ ಕೊಲೆ ಮಾಡಿದ್ದಾರೆ. ಭಯೋತ್ಪಾದನೆ ಜಾಸ್ತಿಯಾಗುತ್ತಿದೆ, ಎಲ್ಲಾ ಭಾಗಗಳಲ್ಲೂ ಕೊಲ್ಲತಕ್ಕ ಕೆಲಸ ನಡೆದಿದೆ. ಪಂಜಾಬಿನ ವಿಷಯ ಎಲ್ಲರನ್ನು ಯೋಚನೆಗೆ ಈಡುಮಾಡತಕ್ಕ ವಿಚಾರವಾಗಿದ. ಈಗ ನಡೆದಿರತಕ್ಕ ದುರಂತ ಏನಿದೆ ಅದನ್ನು ಎಲ್ಲರೂ ಖಂಡಿಸತಕ್ಕ ವಿಚಾರವಾಗಿದೆ. ಲಲಿತಮಾಕನ್ ಅವರು ಸುಮಾರು ೩೪–೩೫ ವಯಸ್ಸಿನವರು. ಅತಿ ಚಿಕ್ಕವಯಸ್ಸಿನಲ್ಲಿ ಲೋಕಸಭಾ ಸದಸ್ಯರಾಗಿದ್ದರು. ಅವರ ಹೆಂಡತಿ ಕೂಡ ಚಿಕ್ಕ ವಯಸ್ಸಿನವರು. ಅವರ ಸಂಬಂಧಿಕರೊಬ್ಬರು ಶಿಫಾರಸ್ಸು ಪತ್ರ ತೆಗೆದುಕೊಳ್ಳಲು ಹೋಗಿದ್ದರು ಅವರನ್ನು ಕೂಡ ಹೊಡೆದುಹಾಕಿದ್ದಾರೆ. ಭಯೋತ್ಪಾದನೆ ಹೆಚ್ಚಾಗುತ್ತಿದೆ, ಪಂಜಾಬಿನಲ್ಲಿ ಬಹಳಷ್ಟು ಜನರನ್ನು ಬಲಿ ತೆಗೆದುಕೊಂಡಿದ್ದಾರೆ. ಎಲ್ಲಾ ರಾಜಕೀಯ ಪಕ್ಷದ ಮುಖಂಡರನ್ನು ಕಾಂಗ್ರೆಸ್ (ಐ) ಪಕ್ಷ, ಜನತಾ ಪಕ್ಷ, ಭಾರತೀಯ ಜನತಾ ಪಕ್ಷ ಲೋಕದಳದ ಅಧ್ಯಕ್ಷರು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರಿಗೆ ಬೆದರಿಕೆಗಳು ಬಂದಿವೆ. ನಿರಪರಾಧಿಗಳನ್ನು ಕೊಲ್ಲತಕ್ಕ ಕೆಲಸ ನಡೆಯುತ್ತಿದೆ. ಕಾನಿಷ್ಕ ವಿಮಾನ ದುರಂತಕ್ಕೂ ಅವರೇ ಕಾರಣ ಎನ್ನುವ ವದಂತಿ ಬರುತ್ತಿದೆ. ಲೋಕಸಭಾ ಮತ್ತು ಇತರ ಸಭೆಗಳಲ್ಲಿ ಸದಸ್ಯರಾಗಿರುವವರು ಕೆಲಸಮಾಡುವುದಕ್ಕೆ ಕಷ್ಟವಾಗಿದೆ. ಸಾರ್ವಜನಿಕ ಜೀವನದಲ್ಲಿರತಕ್ಕವರು ಯಾರೂ ಕೂಡ ಇನ್ನು ಮೇಲೆ ಧೈರ್ಯವಾಗಿ ಕೆಲಸಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಸಂದರ್ಭ ಆ ಒಂದು ಪರಿಸ್ಥಿತಿ ಬಂದಿದೆ, ಇಂತಹ ಒಂದು ಪರಿಸ್ಥಿತಿಯಲ್ಲಿ ನಾನು ಎಲ್ಲಾ ರಾಜಕೀಯ ಪಕ್ಷಗಳವರನ್ನು ಅಭಿನಂದಿಸುತ್ತೇವೆ. ಧೈರ್ಯವಾಗಿ ರಾಜಕೀಯದಲ್ಲಿ ತಮ್ಮ ಸೇವೆ